www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಸಂಚಿಕೆ–01 ಜನವರಿ 2015
Volume : IX Issue : 01 January 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**

Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಭಕ್ತರ ಹೇಳಿಕೆಗಳು
3. ದೇವರು ನಮ್ಮ ಜೀವಿತದಲ್ಲಿ ಮಾಡುವ ಹೊಸ ಕಾರ್ಯಗಳು
4. ವಿಶ್ವಾಸದಮನೆಗೆ ಭೇಟಿ ನೀಡಿದವರ ಅನಿಸಿಕೆಗಳು
5. ಆರೋಗ್ಯ ಸ್ವರ
6. ಸ್ಥಳೀಯ ಮತ್ತು ವಿದೇಶ ಸುದ್ಧಿ
7. ನೀತಿವಂತನ ಆಶೀರ್ವಾದಗಳು
8. ವಯಸ್ಕರ ಸ್ವರ –
9. ಆರಾಧನೆ
10. ಮಹಿಳೆಯರ ಸ್ವರ
11. ಸಾಕ್ಷಿಯ ಸ್ವರ
12. ಮಕ್ಕಳ ಸ್ವರ
13. ಪ್ರಾರ್ಥನಾ ಮನವಿಗಳು
14. ಬೇತೇಲ್ ಅಂಕಣ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಕ್ರಿಸ್ತನಲ್ಲಿ ಪ್ರಿಯ ಸಹೋದರ/ಸಹೋದರಿಯರಿಗೆ ನನ್ನ ಆತ್ಮೀಯ ವಂದನೆಗಳು ಹಾಗೂ ಹೊಸ ವರ್ಷದ ಶುಭಾಶಯಗಳು.

ಹಳೆಯ ವರ್ಷದ ಎಲ್ಲಾ ಅಪಜಯಗಳನ್ನು ಮರೆತು ಕರ್ತನಾದ ಯೇಸುಕ್ರಿಸ್ತನನ್ನು ದೃಷ್ಟಿಸಿ ನಾವೆಲ್ಲರೂ ನಿರೀಕ್ಷೆಯಿಂದ ಮುಂದುವರಿಯೋಣ. ಕರ್ತನಾದ ಯೇಸುಕ್ರಿಸ್ತನಲ್ಲಿ ನಮಗೊಂದು ನಿರೀಕ್ಷೆ ಇದೆ. ಒಣ ಎಲುಬುಗಳಿಗೆ ಜೀವ ಕೊಟ್ಟ ದೇವರು ನಮ್ಮ ದೇವರು, ಸತ್ತವರನ್ನು ಎಬ್ಬಿಸಿದ ದೇವರು ನಮ್ಮ ದೇವರು (ಯೆಹೆ. 37:1–14). ಆತನು ನಂಬಿಕೆಯನ್ನು ಹುಟ್ಟಿಸುವವನೂ ಮಾತ್ರವಲ್ಲದೇ ನಂಬಿಕೆಯನ್ನು ಪೂರೈಸುವ ದೇವರಾಗಿದ್ದಾನೆ (ಇಬ್ರಿ. 12:1–2). ಕರ್ತನಾದ ಯೇಸುಕ್ರಿಸ್ತನ ಕೃಪೆಯಲ್ಲಿ ಹೊಸ ಕಾರ್ಯಗಳನ್ನು ಮಾಡುವಿರಿ, ಹೊಸ ಸೇವೆಗಳನ್ನು ಮಾಡುವಿರಿ, ಹೊಸ ಸ್ಥಾಪನೆಗಳನ್ನು ಸ್ಥಾಪಿಸುವಿರಿ. ಇಲ್ಲಿಯವರೆಗೆ ಮಾಡದ ಅನೇಕ ಕಾರ್ಯಗಳನ್ನು ಮಾಡಲು ಕರ್ತನು ನಿಮಗೆ ಕೃಪೆ ಕೊಡುವನು, ನಿಮ್ಮ ಸೇವೆಗೆ ವಿಶಾಲತೆ ಕೊಡುವನು. "ನಿನ್ನ ಗುಡಾರದ ಸ್ಥಳವನ್ನು ವಿಸ್ತರಿಸು, ನಿನ್ನ ನಿವಾಸದ ಪರದೆಗಳು ಹರಡಲಿ, ಸಂಕೋಚಪಡಬೇಡ; ನಿನ್ನ ಹಗ್ಗಗಳನ್ನು ಉದ್ದಮಾಡಿ ಗೂಟಗಳನ್ನು ಬಲಪಡಿಸು. ನೀನು ಎಲ್ಲಾ ಕಡೆಗಳಲ್ಲಿಯೂ ಹಬ್ಬಿಕೊಳ್ಳುವಿ; ನಿನ್ನ ಸಂತಾನದವರು ಜನಾಂಗಗಳನ್ನು ವಶಮಾಡಿಕೊಂಡು ಹಾಳು ಪಟ್ಟಣಗಳನ್ನು ಜನಭರಿತವಾಗುವಂತೆ ಮಾಡುವರು" (ಯೆಶಾ. 54:2–3). ಕರ್ತನು ನಿಮ್ಮನ್ನು ಆಶೀರ್ವದಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

5) "ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ" (ಇಬ್ರಿ. 4:12). ಯೆಹೂದ್ಯರು ಚಕ್ರವರ್ತಿ ಆರಾಧನೆಗೆ ತಲೆಬಾಗಿದ್ದರಿಂದ ಕ್ರೈಸ್ತರು (ವಿಶ್ವಾಸಿಗಳು) ಹಿಂಸೆಯನ್ನು ಅನುಭವಿಸ ಬೇಕಾಯಿತು. ನಾವು ಜೀವ ಹೋದರೂ ತ್ರಯೇಕ ದೇವರನ್ನು ಬಿಟ್ಟು ಯಾರನ್ನು, ಯಾವುದನ್ನು ಪೂಜಿಸಬಾರದು, ಆರಾಧಿಸಲೂ ಬಾರದು.

ಪ್ರಕ. 2:10 ರಲ್ಲಿ ಹೇಳಿರುವ 10 ದಿನಗಳ ಹಿಂಸೆ, 10 ರೋಮನ್ ಚಕ್ರವರ್ತಿಗಳ ಆಡಳಿತದ ಅವಧಿಯಲ್ಲಿ ನಡೆದ ವಿಚಾರವಾಗಿತ್ತು. ಕ್ರೈಸ್ತ ವಿಶ್ವಾಸಿಗಳು ಸತ್ಯ ದೇವರಾದ ಯೇಸುಕ್ರಿಸ್ತನನ್ನು ಅರಿತಿದ್ದರಿಂದಲೂ ರಕ್ಷಣೆಯ ಸತ್ಯವನ್ನು ತಿಳಿದುಕೊಂಡದ್ದರಿಂದಲೂ ಸತ್ಯಕ್ಕಾಗಿ ನಿಂತರು. ದಾನಿಯೇಲನ ಕಾಲದಲ್ಲೂ ಚಕ್ರವರ್ತಿ ಆರಾಧನೆಯು ಆಚರಣೆಗೆ ಬರುವುದನ್ನು ಕಾಣಬಹುದು. ದಾನಿ. 6:1–10ರಲ್ಲಿ ಆಗ ದಾನಿಯೇಲನು ಮಾತ್ರ ಸತ್ಯಕ್ಕಾಗಿ ನಿಲ್ಲುವುದನ್ನು ಅದರ ನಿಮಿತ್ತವಾಗಿ ಹಸಿದ ಸಿಂಹದ ಗವಿಗೆ ಹಾಕಲ್ಪಡುವುದನ್ನು ದೇವರು ಆತನೊಂದಿಗೆ ನಿಂತು ಹಸಿದ ಸಿಂಹಗಳ ಬಾಯಿಯಿಂದ ದಾನಿಯೇಲನನ್ನು ರಕ್ಷಿಸಿ ದಾನಿ. 6:28ರಂತೆ ಘನಪಡಿಸುವುದನ್ನು ಕಾಣಬಹುದಾಗಿದೆ.

ಒಬ್ಬರ ನಂತರ ಒಬ್ಬರಾಗಿ ರೋಮ ಸಾಮ್ರಾಜ್ಯವನ್ನು ಆಳಿದ 10 ಚಕ್ರವರ್ತಿಗಳು :–

1. ನೀರೋ
2. ಡೊಮಿಟನ್
3. ಟ್ರಾಜನ್
4. ಅಂತೋಣಿಯಸ್
5. ಸೈವರೂತ್
6. ಮ್ಯಾಕ್ಸಿಮೀಂ
7. ಡಿಸ್ಸೂಸ್
8. ವಲೇರಿಯನ್
9. ಜಾರಲ್ಸನ್
10. ಡಯೋಕ್ಲಿಷನ್.

ರಕ್ತ ಸಾಕ್ಷಿಗಳು :– ಎ) ನಂಬಿಕೆಗಾಗಿ ರಕ್ತ ಸಾಕ್ಷಿಯಾಗಿ ಸಾಯುವವರು ಪರೀಕ್ಷೆ ಸಹಿಸುವವರು :– ರಕ್ತ ಸಾಕ್ಷಿಗಳಾಗಿ ಬದುಕುವರು. ಕ್ರಿಸ್ತಶಕ 167 ರಿಂದ ಕ್ರಿಸ್ತಶಕ 313 ಕಾನ್‌ಸ್ಟೆಂಟೇನ್‌ನ ಕಾಲವಾಗಿತ್ತು.

**ಜಯ ಹೊಂದುವವನಿಗೆ ಜಯಮಾಲೆ (ಪ್ರಕ. 2:10) :** ಜಯಮಾಲೆ ಎಂಬ ಪದ ತಪ್ಪು ಅದು ಕನ್ನಡ ಸಂಸ್ಕೃತಿಗೆ ಹೊಂದಿಕೊಂಡಿದೆ. ಗ್ರೀಕ್ ಭಾಷೆಯಲ್ಲಿ 2 ಪದಗಳನ್ನು ಜಯಮಾಲೆ ಎಂಬ ಶಬ್ದಕ್ಕೆ ಬಳಸಲಾಗಿದೆ.

1) Diadema (ಡಾಯಡೇಮಾ) ರಾಜರಿಗೆ ಮುಡಿಸುವ ಕಿರೀಟ

2) Steenanos ಜಯಶಾಲಿಗೆ ಮುಡಿಸುವ ಕಿರೀಟ (ಸ್ಟೇನಾನೋಸ್) : ಸ್ಟೇನಾನೋಸ್ ರಾಜಕೀಯವಲ್ಲ, ಜಯ ಹೊಂದಿದವನಿಗೆ ಕೊಡುತ್ತಾರೆ. ಪುರಾತನ ಗ್ರೀಕ್ ಸಂಪ್ರದಾಯದಿಂದ ಈ ಪದ ಬಂದಿದೆ. ಇಂದು ಒಲಿಂಪಿಕ್ಸ್‌ನಲ್ಲಿ ಒಲೀವ ಮರದ ಕೊಂಬೆಯಿಂದ ಮಾಡಿದ ಕಿರೀಟ ಮುಡಿಸುತ್ತಾರೆ.

**5 ವಿಧವಾದ ಕಿರೀಟಗಳು ದೇವಜನರಿಗಾಗಿ ಕರ್ತನಿಂದ ದೊರಕುವಂಥವುಗಳು:–**

1) **ಬಾಡಿ ಹೋಗದ ಕಿರೀಟ :–** ಹಳೆಯ ಮನುಷ್ಯನ ಮೇಲೆ ಜಯ ಹೊಂದುವವನಿಗೆ ಶರೀರದ ಮೇಲೆ ಜಯ ಹೊಂದುವವನಿಗೆ ಇದು ಸಿಗುತ್ತದೆ (1ಕೊರಿ. 9:24–27).

2) **ಹೊಗಳಿಕೊಳ್ಳುವ ಕಿರೀಟ :–** ಆತ್ಮಗಳನ್ನು ಗೆಲ್ಲುವವರಿಗೆ ಇದು ಸಿಗುತ್ತದೆ. ನಾವು ದೇವರಿಗಾಗಿ ಆತ್ಮಗಳನ್ನು ಸಂಪಾದನೆ ಮಾಡಬೇಕು (1 ಥೆಸ. 2:19).

ನಾನಂತೂ ನಿರಪರಾಧಿಯು, ನಿನ್ನ ಸಾನಿಧ್ಯವನ್ನು ಸೇರುವೆನು.
ಎಚ್ಚೆತ್ತಾಗ ನಿನ್ನ ಸ್ವರೂಪ ದರ್ಶನದಿಂದ ತೃಪ್ತನಾಗಿರುವೆನು (ಕೀರ್ತ. 17:15).

3) **ನೀತಿಯ ಕಿರೀಟ :–** ಹೋರಾಟ ಮತ್ತು ಹಿಂಸೆ ಬಾಧೆಗಳಲ್ಲಿ ಸಾಯುವವರೆಗೆ ಅಥವಾ ಕ್ರಿಸ್ತನ ಬರೋಣದವರೆಗೆ ನಂಬಿಕೆಯನ್ನು ಕಾಪಾಡಿ ಜಯದೊಂದಿಗೆ ತಮ್ಮ ಇಹಲೋಕದ ಜೀವನವನ್ನು ಮುಗಿಸುವವರಿಗೆ ಇದು ಸಿಗುತ್ತದೆ (2ತಿಮೊ. 4:7–8).

4) **ಮಹಿಮೆಯ ಕಿರೀಟ :–** ದೇವರ ಕುರಿಗಳೆಂಬ ಸಭೆಯನ್ನು ನಂಬಿಗಸ್ಥಿಕೆಯಿಂದ ಮೇಯಿಸುವವರಿಗೆ ಸಿಗುವ ಕಿರೀಟ (1 ಪೇತ್ರ. 5:4).

5) **ಜೀವವೆಂಬ ಕಿರೀಟ :–** ಕ್ರಿಸ್ತೀಯ ಜೀವನದಲ್ಲಿ ಬರುವ ಪರೀಕ್ಷೆಗಳನ್ನು ಸಹಿಸುವವರಿಗೆ ಸಿಗುವ ಕಿರೀಟ ಇದಾಗಿದೆ (ಪ್ರಕ. 2:10, ಯಾಕೋ. 1:12).

ರೋಮನ್ ಹಣದ Coinನಲ್ಲಿ ಒಂದು ಎತ್ತು ನೊಗವನ್ನು ಹೊತ್ತು ಯಾಗ ಪೀಠದ ಮುಂದೆ ನಿಂತಿದೆ. ಅದಕ್ಕೆ 2 ಆರಿಸುವಿಕೆಗಳು ಇವೆ. 1) ಯಾಗ ಪೀಠದಲ್ಲಿ ಬಲಿಯಾಗಬಹುದು – ರಕ್ತಸಾಕ್ಷಿ

3) **ಜೀವನವಿಡೀ ನೊಗದ ಕೆಳಗಡೆ ಇರಬಹುದು– ಜೀವಿಸುವ ರಕ್ತಸಾಕ್ಷಿ**

ಎರಡು ಸಲ ಹುಟ್ಟಿದವನಿಗೆ ಒಂದೇ ಸಾರಿ ಮರಣ 1) ಶರೀರದಲ್ಲಿ 2) ಆತ್ಮದಲ್ಲಿ ಹೊಸದಾಗಿ ಹುಟ್ಟುವದು.
ಒಂದು ಸಲ ಹುಟ್ಟಿದವನಿಗೆ (ಶರೀರದಲ್ಲಿ) 2 ಮರಣಗಳು 1)ಶರೀರದ ಮರಣ 2) ನಿತ್ಯ ಮರಣ (ನರಕ, ಅಗ್ನಿ, ಗಂಧಕಗಳ ಕರೆಯಲ್ಲಿ ನಿತ್ಯಕ್ಕೂ ಬಾಧೆಪಡುವದು).

ಪ್ರಕ. 2:9–10ರಲ್ಲಿ ಸತ್ತವನಾಗಿದ್ದು ಜೀವಿತನಾಗಿ ಬಂದ ಆದ್ಯಂತನು ಹೇಳುವದೇನಂದರೆ ದೇವರು ಈ ಸಭೆಗೆ ತನ್ನನ್ನು ಈ ರೀತಿಯಾಗಿ ಪ್ರಕಟಿಸಿಕೊಳ್ಳುತ್ತಿದ್ದಾನೆ. ಏಕೆಂದರೆ ಕ್ರಿಸ್ತನು ತಾನೇ ಈ ಎಲ್ಲಾ ಹಿಂಸೆಯನ್ನು ದಾಟಿ ಸತ್ತವನಾದನು ಆದರೆ ಮರಣವು ಆತನನ್ನು ಹಿಡಿಯಲಿಲ್ಲ. ಆದುದರಿಂದ ಕ್ರಿಸ್ತನು ಮರಣದ ಬಲವನ್ನು ಮುರಿದುಹಾಕಿ ಜಯಶಾಲಿಯಾಗಿ ಎದ್ದು ನಮಗಾಗಿ ಸದಾ ಜೀವಿಸುವವನಾಗಿದ್ದಾನೆ. ಸ್ಮುರ್ನ ಸಭೆಯು ಹಿಂಸೆಯನ್ನು ಎದುರಿಸುವುದರಿಂದ ಸತ್ತರೂ ಕ್ರಿಸ್ತನ ಬರೋಣದಲ್ಲಿ ಜೀವಿತರಾಗಿ ಎದ್ದು ಬರುವರು ಎಂಬುದನ್ನು ಈ ಸಭೆಗೆ ತಿಳಿಸಿದನು. ಏಕೆಂದರೆ ಈ ಸಭೆ ಅನೇಕ ಹಿಂಸೆಗಳನ್ನು ಹಾದು ಹೋಗಬೇಕಿತ್ತು. ಸ್ಮುರ್ನದ ಯೆಹೂದ್ಯರು ಕ್ರೈಸ್ತ ವಿಶ್ವಾಸಿಗಳನ್ನು ವಿರೋಧಿಸಿ ದೂಷಿಸುತ್ತಿದ್ದರು ಆದರೆ ಇವರು ಸುಳ್ಳು ಯೆಹೂದ್ಯರಾಗಿದ್ದರು ಹಾಗೂ ಸೈತಾನನ ಸಭಾಮಂದಿರಕ್ಕೆ ಸೇರಿದವರಾಗಿದ್ದರು, ಸೈತಾನನ ಸೇವಕರಾಗಿರುತ್ತಾರೆ ಎಂದು ಕರ್ತನಾದ ಯೇಸುಕ್ರಿಸ್ತನು ತಿಳಿಸುತ್ತಿದ್ದಾನೆ. **"ಹೊರಗೆ ಮಾತ್ರ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ; ಮತ್ತು ಹೊರಗೆ ಶರೀರದಲ್ಲಿ ಮಾತ್ರ ಮಾಡಿರುವ ಸುನ್ನತಿಯು ಸುನ್ನತಿಯಲ್ಲ. ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು; ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ, ಆತ್ಮ ಸಂಬಂಧಪಟ್ಟದ್ದೇ; ಇಂಥಾ ಸುನ್ನತಿಯಿದ್ದವನಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದ ಬರುವದಲ್ಲ"** (ರೋಮ. 2:28–29). ಹೃದಯದಲ್ಲಿ ಮಾನಸಾಂತರ ಇಲ್ಲದ ಯೆಹೂದ್ಯರನ್ನೇ ಕರ್ತನಾದ ಯೇಸುಕ್ರಿಸ್ತನು ಸೈತಾನನ ಸಮಾಜದವರು ಎಂದು ಕರೆದನು.

ದೇವ ಜನರು ಹೃದಯದಲ್ಲಿ ಮಾನಸಾಂತರಪಡದೆ ಎಷ್ಟೇ ಭಕ್ತಿಮಾಡಿದರೂ, ಏನೂ ಪ್ರಯೋಜವಿಲ್ಲ. ದೇವಜನರು ಮಾನಸಾಂತರ ಪಡುವಾಗ ಜೀವಿತವು ಬದಲಾಗುತ್ತದೆ. ಬದಲಾದ ಜೀವಿತದಿಂದ ಮಾಡುವ ಭಕ್ತಿಯು ದೇವರಿಂದ ಅಂಗೀಕಾರವಾಗುತ್ತದೆ.

10 ದಿವಸಗಳ ಸಂಕಟ ಅಂದರೆ ಈಗಾಗಲೇ ಮೇಲೆ ತಿಳಿಸಿದಂತೆ ನೀರೋ ಚಕ್ರವರ್ತಿಯಿಂದ ಡಯೋಕ್ಲೇಟನ್‌ನವರೆಗೆ ರೋಮನ್ 10 ಅರಸರ ಆಡಳಿತಾವಧಿಯಲ್ಲಿ ಕ್ರೈಸ್ತ ವಿಶ್ವಾಸಿಗಳಿಗಿರುವ ಹಿಂಸೆಯಾಗಿದೆ. ಅದಕ್ಕೆ ಇನ್ನೊಂದು ಅರ್ಥವೂ ಇದೆ. ಆಸ್ಯ ಸೀಮೆಯ ಎಲ್ಲಾ ಕ್ರೈಸ್ತ ಸಭೆಗಳು ಹೊಂದಿದ 10 ವರ್ಷಗಳ ಹಿಂಸೆ ಎಂಬುದನ್ನು ತಿಳಿಸುತ್ತದೆ

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
***ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್***

ನೀನು ದಯೆಯೂ, ಕನಿಕರವೂ, ದೀರ್ಘಶಾಂತಿಯೂ, ಮಹಾಕೃಪೆಯೂ ಉಳ್ಳದೇವರು, ಮಾಡಬೇಕೆಂದಿದ್ದ ಕೇಡಿಗೆ ಮನಮರುಗುವವನು ಎಂದು ತಿಳಿದಿದ್ದೇನೆ (ಯೋನ. 4:2).

# ಭಕ್ತರ ಹೇಳಿಕೆಗಳು

ನಾವು ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರಾರ್ಥನೆ ಮಾಡುವದನ್ನು ಕಲಿತುಕೊಳ್ಳಬೇಕಾಗಿದೆ. ಪ್ರಾರ್ಥನಾ ವೀರರಿಗೆ ಇದನ್ನು ತುತೂರಿಯ ಧ್ವನಿಯೊಡನೆ ತಿಳಿಯಪಡಿಸಬೇಕಾಗಿದೆ. ಪ್ರಾರ್ಥನೆಗೆ ತಡೆಯಾಗುವದು ಯಾವದೆಂದು ನಾವು ಸ್ಪಷ್ಟವಾಗಿ ತಿಳಿಯಬೇಕಾಗಿದೆ. ಅದು ಏನು? ಯಾಕೆ ಹೀಗಾಗುತ್ತಿದೆ? ಕ್ರಿಸ್ತನು ತನ್ನ ಸೇವೆಯ ಹೆಚ್ಚಿನ ಸಮಯವನ್ನು ಪ್ರಾರ್ಥನೆಯಲ್ಲಿ, ಕಳೆದಿರುವಾಗ ನಾವು ಏಕೆ ಅತ್ಯಲ್ಪ ಸಮಯವನ್ನು ಮಾತ್ರ ಪ್ರಾರ್ಥನೆಯಲ್ಲಿ ಕಳೆಯುತ್ತೇವೆ. ಪ್ರಾರ್ಥನೆಗೆ ಉತ್ತೇಜಿಸುವದು ಹೃದಯದಲ್ಲಿ ಕಾಣಿಸಲ್ಪಡುವ ತೀವ್ರವಾದ ಬಯಕೆಯೇ ಆಗಿರುತ್ತದೆ. ನಾವು ಅಶಿಸ್ತಿನಲ್ಲಿ ಜೀವಿಸಿರುವದಾದರೆ, ಲೋಕದ ಒತ್ತಡಗಳಿಂದ ಆವರಿಸಲ್ಪಟ್ಟಿರುವದಾದರೆ ಪ್ರಾರ್ಥನೆಯ ನೆಲೆಗಾಗಿ ಅವಿಶ್ರಾಂತಿಯಾಗಿ ಹುಡುಕದೇ ಇದ್ದರೆ, ಪ್ರಾರ್ಥನೆಯನ್ನು ಮಾಡುವದಕ್ಕೆ ಸಾಧ್ಯವಿಲ್ಲ. ಕೇವಲ ಬಯಕೆ ಇದ್ದ ಮಾತ್ರಕ್ಕೂ ಅಲ್ಲ, ಇವೆಲ್ಲವೂ ಪವಿತ್ರಾತ್ಮನ ಅಧೀನದಲ್ಲಿ ಕಾಣಿಸಲ್ಪಡಬೇಕು. ದೇವರನ್ನು ಏಕಾಂತದ ಕೋಣೆಯಲ್ಲಿ ಹುಡುಕಬೇಕು. ದೇಹದ ಆಶೆಗಳನ್ನೆಲ್ಲಾ ಶಿಲುಬೆಗೆ ಹಾಕಬೇಕು.

**ಘನ. ಹೋಮರ್ ಡಬ್ಲ್ಯೂ. ಹೊಡ್ಜ್.**

ವಿಜ್ಞಾಪನೆಯ ಪ್ರಾರ್ಥನೆಯು, ಪ್ರಾರ್ಥಿಸುವ ವ್ಯಕ್ತಿಗೆ ಇನ್ನೂ ಹೆಚ್ಚಾಗಿ ಪ್ರಾರ್ಥಿಸುವಂತೆ ಕೃಪೆಯನ್ನು ಕೊಡುವಂಥದ್ದಾಗಿದೆ. ಆತ್ಮದಲ್ಲಿ ಯಾವಾಗ ಒಣಗಿದ ಇಲ್ಲವೇ ಬರಿದಾದ ಅನುಭವವನ್ನು ಕಂಡಾಗಲೆಲ್ಲಾ ಇತರರಿಗಾಗಿ ಪ್ರಾರ್ಥಿಸುವದರ ಮೂಲಕ ನನ್ನಲ್ಲಿ ಆತ್ಮೀಕ ಉಜ್ಜೀವನವನ್ನು ಕಾಣುತ್ತಿದ್ದೆ. ಆತ್ಮೀಕ ಜೀವಿತ ಬತ್ತಿ ಹೋದ ಅನುಭವವನ್ನು ಹೊಂದುತ್ತಿರುವಾಗ ಹೆಚ್ಚಾಗಿ ಇತರರಿಗಾಗಿ ಪ್ರಾರ್ಥನೆ ಮಾಡುತ್ತಿದ್ದೆ. ಜನರು ಪಾಪದಿಂದ ಬಿಡುಗಡೆಯನ್ನು ಹೊಂದುವಂತೆಯೂ ಪರಿಶುದ್ಧ ಜೀವಿತವನ್ನು ಜೀವಿಸುವಂತೆಯೂ, ಸಮೃದ್ಧಿಯನ್ನು ಕಾಣುವಂತೆಯೂ ದೇವರ ಸೇವೆಗೆ ಬಿಟ್ಟು ಕೊಡುವಂತೆಯೂ ಪ್ರಾರ್ಥಿಸುತ್ತಿದ್ದೆ. ಹೀಗೆ ಪ್ರಾರ್ಥಿಸುವಾಗ ನಾನು ಸ್ವತ: ದೇವರ ಆಶೀರ್ವಾದಕ್ಕೆ ಮಾಧ್ಯಮವಾಗುತ್ತಿದ್ದೆ. ಕ್ರಿಸ್ತನಲ್ಲಿ ನನ್ನ ಸ್ಥಾನವನ್ನು ತಿಳಿದುಕೊಳ್ಳುತ್ತಿದ್ದೆ. ಈ ರೀತಿಯ ಪ್ರಾರ್ಥನೆಯಿಂದ ಕ್ರಿಸ್ತನಲ್ಲಿರುವ ಬಲವನ್ನು ಪಡೆಯುವದನ್ನೂ ಮತ್ತು ಆತನಲ್ಲಿ ವಿಶ್ರಮಿಸಿಕೊಳ್ಳುವದನ್ನೂ ಕಲಿತುಕೊಂಡೆ.

**ಬಿಷಪ್ ಹ್ಯಾಂಡ್ಲೀ ಸಿ.ಜೆ. ಮೌಲ್.**

ವಿಲ್ಲಿಯಂ ಬೂತ್ ಎಂಬ ಭಕ್ತನಿಗೆ ಆತನ ಜೊತೆ ಸೇವಕನೊಬ್ಬನು ಒಮ್ಮೆ ಪತ್ರ ಬರೆದಿದ್ದನು. ಆ ಪತ್ರದಲ್ಲಿ ತನ್ನ ಸುವಾರ್ತಾ ಸೇವೆಯು ಫಲದಾಯಕವಾಗುತ್ತಿಲ್ಲವೆಂದೂ ಅದಕ್ಕೆ ಸರ್ವ ಪ್ರಯತ್ನ ಮಾಡಿದ್ದಾಯಿತು ಎಂದೂ ಆ ಸೇವಕನು ಬರೆದಿದ್ದನು. ಆಗ ವಿಲ್ಲಿಯಂ ಬೂತರು ಅದಕ್ಕೆ ಪ್ರತ್ಯುತ್ತರವಾಗಿ ಒಂದು ತಂತಿ ವರ್ತಮಾನವನ್ನು ಕಳುಹಿಸಿದರು, "ಕಣ್ಣೀರಿನಿಂದ ಪ್ರಯತ್ನಿಸು" ಎಂದು ಅದರಲ್ಲಿತ್ತು. ಆ ಸೇವಕನು ಅವರ ಸಲಹೆಯಂತೆಯೇ ಕಣ್ಣೀರಿನಿಂದ ದೇವರಲ್ಲಿ ಮೊರೆಯಿಡಲು ಬಹು ಬೇಗನೇ ನಿರೀಕ್ಷಿಸಿದ ಫಲಿತಾಂಶಗಳು ಕಾಣಲಾರಂಭಿಸಿದವು.

ಕಣ್ಣೀರಿನಿಂದ ಬಿತ್ತುವವರು ಆನಂದದ ಫಲವನ್ನು ಪಡೆಯುವರು. (ಕೀರ್ತ. 126:5).

**ವಿಲ್ಲಿಯಂ ಬೂತ್**

ಭಕ್ತರು ತಮಗುಂಟಾದ ಮಹಿಮೆಯಲ್ಲಿ ಹಿಗ್ಗಲಿ; ಹಾಸಿಗೆಯ ಮೇಲಿರುವಾಗಲೂ ಉತ್ಸಾಹಧ್ವನಿ ಮಾಡಲಿ (ಕೀರ್ತ. 149:5).

# ದೇವರು ನಮ್ಮ ಜೀವಿತದಲ್ಲಿ ಮಾಡುವ ಹೊಸ ಕಾರ್ಯಗಳು

ಕರ್ತನಾದ ಯೇಸು ಕ್ರಿಸ್ತನಲ್ಲಿ ಪ್ರೀತಿಯ ಸಹೋದರ ಸಹೋದರಿಯರಿಗೆ ನನ್ನ ವಂದನೆಗಳು ಹಾಗೂ ಹೊಸ ವರ್ಷದ ಶುಭಾಶಯಗಳು. 2014ನೇ ಇಸವಿಯನ್ನು ದಾಟಿ 2015ರ ಆರಂಭದ ಇಸವಿಯಲ್ಲಿ ಬಂದು ನಾವು ನಿಂತಿದ್ದೇವೆ. ಕಳೆದ 2014ರ ವರ್ಷವು ಕೆಲವರಿಗೆ ಕಹಿಯಾಗಿರಬಹುದು, ಇನ್ನು ಕೆಲವರಿಗೆ ಸಿಹಿಯಾಗಿರಬಹುದು. ನಮ್ಮ ದೇವರು ನಮ್ಮ ಜೀವಿತದಲ್ಲಿ ಹೊಸದನ್ನು ಮಾಡುವ ದೇವರಾಗಿದ್ದಾನೆ. ಕರ್ತನಾದ ಯೇಸು ಕ್ರಿಸ್ತನಲ್ಲಿ ದೇವ ಜನರಾದ ನಮಗೆ ಒಳ್ಳೇ ನಿರೀಕ್ಷೆ ಇದೆ. ಕಳೆದ 2014 ರಲ್ಲಿ ನಡೆದ ಕಹಿ ಅನುಭಗಳನ್ನು ಮರೆತು 2015ರಲ್ಲಿ ಹೊಸದರ ಅನುಭವನ್ನು ಹೊಂದಿಕೊಳ್ಳಲು ಕರ್ತನಾದ ಯೇಸು ಕ್ರಿಸ್ತನನ್ನು ದೃಷ್ಟಿಸಿ ಮುನ್ನುಗುವವರಾಗಿರೋಣ. ಸಿಂಹಾಸನದಲ್ಲಿ ಕುಳಿತಿರುವ ದೇವರು ಈ ರೀತಿ ಹೇಳುತ್ತಾನೆ, ಇಗೋ ಎಲ್ಲವನ್ನು ಹೊಸದುಮಾಡುತ್ತೇನೆ. (ಪ್ರಕ. 21:5). ಈ ಲೋಕದಲ್ಲಿ ಅನೇಕ ರಾಜರು, ಮಂತ್ರಿಗಳು ಲೋಕದ ಸಿಂಹಾಸನದಲ್ಲಿ ಕುಳಿತು ಕೊಂಡಿರುತ್ತಾರೆ. ಅವರಿಗಿರುವ ಅಧಿಕಾರ ವ್ಯಾಪ್ತಿಯಲ್ಲಿ ಅವರ ಪ್ರಾಂತ್ಯಗಳಲ್ಲಿ ಕೆಲವೊಂದನ್ನು ಮಾತ್ರ ಅವರು ಮಾಡಲು ಸಾಧ್ಯ. ಆದರೂ ಅವರು ಸರ್ವಶಕ್ತರಲ್ಲ, ಅವರ ಅಧಿಕಾರಕ್ಕೂ ಅವರ ಶಕ್ತಿಗೂ ಒಂದು ಮಿತಿಯಿದೆ. ಆದರೆ ನಮ್ಮ ಕರ್ತನಾದ ಯೇಸುಕ್ರಿಸ್ತನು ಸರ್ವಶಕ್ತನಾದ ದೇವರು. ಆತನು ಪರಲೋಕದ ಸಿಂಹಾಸನದಲ್ಲಿ ಕುಳಿತುಕೊಂಡಿದ್ದಾನೆ ಮತ್ತು ಭೂಮಿ, ಪರಲೋಕದ ಒಡೆಯನಾಗಿದ್ದಾನೆ. ಆತನಿಗೆ ಅಸಾಧ್ಯವಾದದ್ದು ಯಾವುದು ಇಲ್ಲ. (ಯೆಶಾ. 50:2, 59:1–2, ಅರಣ್ಯ. 11:23, ಯೆರೆ. 32:17,27, ಆದಿ. 18:14, ಲೂಕ. 1:37, ಮತ್ತಾ. 19:26). ಈ ಎಲ್ಲಾ ವಾಕ್ಯಗಳು ಹೇಳುತ್ತದೆ, ನಮ್ಮ ದೇವರಿಗೆ ಅಸಾಧ್ಯವಾದದ್ದು ಯಾವುದು ಇಲ್ಲ. ಕರ್ತನಾದ ಯೇಸುವಿನಲ್ಲಿ ನಮಗೆ ನಿರೀಕ್ಷೆ ಇದೆ. ಆ ಕರ್ತನು ಸ್ವರ್ಗ ಸಿಂಹಾಸನದಲ್ಲಿ ಕುಳಿತುಕೊಂಡಿದ್ದಾನೆ. ಆತನು ನಮ್ಮೆಲ್ಲರ ಜೀವಿತದಲ್ಲಿ ಹೊಸದನ್ನು ಮಾಡಲು ಹೋಗುತ್ತಿದ್ದಾನೆ. ಯೆಶಾ. 43:18 ರಲ್ಲಿ ಹೇಳುತ್ತದೆ, ಹಳೇ ಸಂಗತಿಯನ್ನು ಜ್ಞಾಪಕಕ್ಕೆ ತರಬೇಡಿ. ಎರಡನೆಯದಾಗಿ ಪುರಾತನ ಕಾರ್ಯವನ್ನು ಮರೆತುಬಿಡಿ. 2014ರ ಎಲ್ಲಾ ನೋವುಗಳನ್ನು, ಎಲ್ಲಾ ಅಪಜಯವನ್ನು, ಎಲ್ಲಾ ಕಹಿಯಾದ ಅನುಭವಗಳನ್ನು, ಎಲ್ಲಾ ಚಿಂತೆಯನ್ನು ಮರೆತು ಕರ್ತನಾದ ಯೇಸುಕ್ರಿಸ್ತನು ಹೊಸಕಾರ್ಯ ಮಾಡಲು ಆತನ ಕರಕ್ಕೆ ಒಪ್ಪಿಸಿಕೊಡೋಣ.

**ದೇವರು ಮಾಡುವ ಹೊಸ ಕಾರ್ಯಗಳು :–**

**1. ಅರಣ್ಯದಲ್ಲಿ ದೇವರು ಮಾರ್ಗವನ್ನು ಸಿದ್ಧಮಾಡುವನು (ಯೆಶಾ. 43:19).**

**2. ಅಡವಿಯಲ್ಲಿ ದೇವರು ನದಿಗಳನ್ನು ಹರಿಯಮಾಡುತ್ತಾನೆ (ಯೆಶಾ. 43:19).**

**3. ನೂತನ ಫಲಗಳನ್ನು ದೇವರು ಉಂಟುಮಾಡುವನು (ಪರಮ. 7:13).**

**4. ಹೊಸ ಬಲವನ್ನು ಕೊಡುತ್ತಾನೆ (ಯೆಶಾ. 40:29–31).**

**5. ನಮ್ಮ ದು:ಖವನ್ನು ನೀಗಿಸಿ ಸಂತೋಷವನ್ನು ಅನುಗ್ರಹಿಸುವನು (ಯೋಹಾ. 16:20–21).**

**6. ನೂತನ ಸೃಷ್ಟಿಯನ್ನಾಗಿ ನಮ್ಮನ್ನು ಮಾರ್ಪಡಿಸುವನು (2 ಕೊರಿ. 5:17).**

**7. ನಮಗಾದ ಅವಮಾನಕ್ಕೆ 2ರಷ್ಟು ಮಾನವನ್ನು ಅನುಗ್ರಹಿಸುವನು (ಯೆಶಾ. 61:7).**

1) **ಅರಣ್ಯದಲ್ಲಿ ಮಾರ್ಗ ಸಿದ್ಧಮಾಡುವನು :–** ಈ ಲೋಕವೆಂಬ ಅರಣ್ಯದಲ್ಲಿ ಜೀವಿಸುವಂತಹ ನಮಗೆ ಅನೇಕ ಮಾರ್ಗಗಳು ಮುಚ್ಚಿರುವುದರಿಂದ ಮುಂದುವರಿಯಲು ಸಾಧ್ಯವಿಲ್ಲ. ಅರಣ್ಯ ಏನು ಸೂಚಿಸುತ್ತದೆ?

1. ಅದು ಮುಚ್ಚಲ್ಪಟ್ಟ ಮಾರ್ಗಕ್ಕೆ ಸೂಚನೆಯಾಗಿದೆ.
2. ಬೆಳಕಿನ ಕಿರಣಗಳು ಹೋಗಲಾರದಷ್ಟು ಕತ್ತಲಾದ ಸ್ಥಳ.
3. ಅಕ್ರಮಣ ಮಾಡುವ ಕಾಡು ಮೃಗಗಳಿಂದ ತುಂಬಿದಂತಹ ಸ್ಥಳ.
4. ಮಾನುಷಿಕ ಸಹಾಯವಿಲ್ಲದೆ ಒಂಟಿಯಾಗಿ ನಿಲ್ಲುವಂತಹ ಸ್ಥಳ.

ಈ ಹೊತ್ತು ನಿಮ್ಮ ಪರಿಸ್ಥಿತಿ ಇದೇ ರೀತಿಯಾಗಿರಬಹುದು. ಜೀವಿತದಲ್ಲಿ ಮುಂದುವರಿಯಲು ಮಾರ್ಗ ಕಾಣದೆ ಸೋತು ಹೋಗಿರುವಿರೋ? ಮರಣದ ಮೂಲಕವಾಗಿ ನಿಮ್ಮ

ನಾನಂತೂ ಯೆಹೋವನೇ, ನಿನ್ನ ಆಜ್ಞೆಯನ್ನು ಮೀರಿ ಪಾಪ ಮಾಡಿದ್ದೇನೆ;
ನನ್ನನ್ನು ಕರುಣಿಸಿ ಸ್ವಸ್ಥಮಾಡು (ಕೀರ್ತ. 41:4).

ಸಂಗಾತಿಯನ್ನು ಕಳೆದುಕೊಂಡು ಕತ್ತಲೆಯ ಅನುಭವದಲ್ಲಿದ್ದೀರೋ? ಜೀವಿತದಲ್ಲಿ ಬೆಳಕು ಕಾಣದೆ ನಿರಾಶೆಯ ಅನುಭವದಲ್ಲಿ ಜೀವಿಸುತ್ತಿದ್ದೀರೋ? ಕಾಡು ಮೃಗಗಳಂತಿರುವ ಹೃದಯ ಹಾಗೂ ಪ್ರೀತಿ ಇಲ್ಲದ ವ್ಯಕ್ತಿಗಳ ಅಕ್ರಮಣಕ್ಕೆ ಒಳಗಾಗಿದ್ದೀರೋ? ಈ ಎಲ್ಲಾ ಅನುಭವಗಳ ಮಧ್ಯದಲ್ಲಿ ಹೊಸ ಮಾರ್ಗವನ್ನು ನಿಮಗಾಗಿ ತೆರೆಯುವನು, ಹೊಸ ವ್ಯಕ್ತಿಗಳನ್ನು ನಿಮಗಾಗಿ ಕೊಡುವನು.

**"ಅರಣ್ಯವೂ ಮರುಭೂಮಿಯೂ ಆನಂದಿಸುವವು; ಒಣನೆಲವು ಹರ್ಷಿಸಿ ತಾವರೆಯಂತೆ ಕಳಕಳಿಸುವದು"** (ಯೆಶಾ. 35:1). **"ನಿನ್ನ ಸೂರ್ಯನು ಇನ್ನು ಮುಣುಗನು, ನಿನ್ನ ಚಂದ್ರನು ತೊಲಗನು; ಯೆಹೋವನೇ ನಿನಗೆ ನಿತ್ಯಪ್ರಕಾಶವಾಗಿರುವನು, ನೀನು ದು:ಖಿಸುವ ದಿನಗಳು ಕೊನೆಗಾಣುವವು"** (ಯೆಶಾ. 60:20).

2) **ಅಡವಿಯಲ್ಲಿ ನದಿಗಳನ್ನು ಹರಿಯಮಾಡುವನು** :– ಅಡವಿ ಅಂದರೆ ಅದರ ಮೂಲ ಅರ್ಥ ಮರುಭೂಮಿ. ಮರುಭೂಮಿ ಏನನ್ನು ಸೂಚಿಸುತ್ತದೆ?

1. ದಾರಿ ತಪ್ಪಿ ದಿಕ್ಕು ತೋಚದಂತಹ ಒಂದು ಅನುಭವ
2. ನಿರಾಶರಾಗಿ ನಿರೀಕ್ಷೆ ಕಳಕೊಂಡ ಅನುಭವ
3. ಮಾನುಷಿಕ ಸಹಾಯವಿಲ್ಲದೆ ನಿಂತಂತಹ ಅನುಭವ
4. ಉತ್ಪತ್ತಿ ಶೂನ್ಯವಾದ ಅನುಭವ
5. ಸಾಯುವಂತಹ ಅನುಭವ
6. ನಂಬಿಕೆ ಕಳಕೊಂಡ ಅನುಭವ
7. ಕೊರತೆಗಳಲ್ಲಿ ನಿಂತಂತಹ ಅನುಭವ.

ಪ್ರಿಯ ಸಹೋದರ/ಸಹೋದರಿಯೇ ನೀನು ಒಂದು ವೇಳೆ ಇಂತಹ ಅನುಭವದಲ್ಲಿ ನಿಂತವನಾಗಿರುವುದಾದರೆ ಕರ್ತನಾದ ಯೇಸುಕ್ರಿಸ್ತನು ಈ ಎಲ್ಲ ಅನುಭವದಿಂದ ಬಿಡುಗಡೆ ಮಾಡಿ ನಿನಗಾಗಿ ನದಿಗಳನ್ನು ಅಂದರೆ ಆಶೀರ್ವಾದದ ನದಿಗಳನ್ನು ಸುರಿಸುವನು. **"ಯೆಹೋವನು ವಿಮೋಚಿಸಿದವರು ಹಿಂದಿರುಗಿ ಶಾಶ್ವತಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ ಚೀಯೋನಿಗೆ ಸೇರುವರು; ಹರ್ಷಾನಂದಗಳನ್ನು ಅನುಭವಿಸುವರು, ಮೊರೆಯೂ ಕರಕರೆಯೂ ತೊಲಗಿಹೋಗುವವು"**(ಯೆಶಾ. 35:10).

3) **ನೂತನ ಫಲಗಳನ್ನು ದೇವರು ಉಂಟುಮಾಡುವನು** :– ಫಲ ಅಂದರೆ

1) ಪರಿಶುದ್ಧಾತ್ಮನ ಅಭಿಷೇಕವು ನಮ್ಮ ಮೇಲೆ ಸುರಿಸಲ್ಪಟ್ಟು ನಮ್ಮ ಜೀವಿತದ ಮೂಲಕ ಪ್ರಕಟವಾಗುವ ಗುಣ ಸ್ವಭಾವಗಳು ಫಲವಾಗಿದೆ.

2) ನಮ್ಮ ಸೇವೆಯಲ್ಲಿ ಉಂಟಾಗುವ ಒಂದು ಬೆಳವಣಿಗೆ.

3) ಕರ್ತನ ಸೇವೆಯಲ್ಲಿ ಪ್ರಯೋಜನಪಡುವುದು.

4) ಜೀವಿತದಲ್ಲಿ ಸಾಕ್ಷಿ ಕಳಕೊಳ್ಳುವಂತದ್ದು.

ಮೇಲಿನ 4 ಸಂಗತಿಗಳಲ್ಲಿ ನಾವು ಸೋತು ಹೋಗಿರುವುದಾದರೆ ಕರ್ತನು ನಮ್ಮಲ್ಲಿ ನೂತನ ಫಲವನ್ನು ಉಂಟು ಮಾಡುತ್ತಾನೆಂಬ ನಂಬಿಕೆಯಿಂದ ಮುಂದುವರಿಯೋಣ.

4) **ಹೊಸ ಬಲವನ್ನು ಕೊಡುತ್ತಾನೆ** :– (ಯೆಶಾ. 40:29–31). ಪ್ರಿಯರೇ, 2014 ರಲ್ಲಿ ಕೆಲವು ದುರ್ಘಟಣೆಗಳ ನಿಮಿತ್ತ, ಕೆಲವು ವ್ಯಾಧಿಗಳ ನಿಮಿತ್ತ ಜೀವಿತದಲ್ಲಿ ಬಲವನ್ನು ಕಳಕೊಂಡು ಕುಗ್ಗಿ ಹೋಗಿರುವುದಾದರೆ ದೇವರು ಹೊಸ ಕಾರ್ಯಗಳನ್ನು ಮಾಡಲು ಹೋಗುತ್ತಾನೆ.

5) **ನಮ್ಮ ದು:ಖ ನೀಗಿಸಿ ಸಂತೋಷವನ್ನು ಅನುಗ್ರಹಿಸುವನು:** 2014ರಲ್ಲಿ ನಿಮ್ಮ ಕುಟುಂಬ ಸದಸ್ಯರನ್ನು ಮರಣದ ಮೂಲಕ ಕಳಕೊಂಡಿರುವಿರೋ, ವ್ಯಾಪಾರದಲ್ಲಿ ನಷ್ಟ ಅನುಭವಿಸಿರುವಿರೋ, ಕೆಲಸ ಕಳಕೊಂಡು ಕೆಲಸವಿಲ್ಲದಿರುವಿರೋ, ಕೆಲವು ವ್ಯಾಧಿಗಳಿಗೆ ಒಳಗಾಗಿ ಹಾಸಿಗೆಯಲ್ಲಿ ಮಲಗಿಕೊಂಡವರಾಗಿರುವಿರೋ, ಸಾಲಗಳಲ್ಲಿ ಮುಳುಗಿ ಹೋಗಿರುವಿರೋ, ಮನುಷ್ಯರಿಂದ ನಿಂದೆ ಅಪಮಾನವನ್ನು ಸಹಿಸಿ ದು:ಖದಲ್ಲಿ ತೊಳಲಾಡುತ್ತಿರುವಿರೋ? ಕರ್ತನು ನಿಮ್ಮ ದು:ಖವನ್ನು ನೀಗಿಸಿ ಸಂತೋಷದ ಅನುಭವದಲ್ಲಿ ನಡೆಸುವನು. **"ಆತನ ಕೋಪವು ಕ್ಷಣಮಾತ್ರವೇ; ಆತನ ಅನುಗ್ರಹವೋ ಜೀವಮಾನವೆಲ್ಲಾ ಇರುವದು; ಸಂಜೆಗೆ ದು:ಖವೆಂಬದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು"** (ಕೀರ್ತ. 30:5). **"ಆಗ ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದಿ; ನಾನು ಕಟ್ಟಿಕೊಂಡಿದ್ದ ಗೋಣಿತಟ್ಟನ್ನು ತೆಗೆದುಬಿಟ್ಟು ಹರ್ಷವಸ್ತ್ರವನ್ನು ನನಗೆ ಧಾರಣೆಮಾಡಿಸಿದಿ.**

ಯೆಹೋವನು ನಿಮ್ಮ ಮೇಲೆ ಕೃಪಾಕಟಾಕ್ಷವಿಟ್ಟು ಶಾಂತಿಯನ್ನು ಅನುಗ್ರಹಿಸಲಿ
(ಅರಣ್ಯ. 6:26).

**ಇದರಿಂದ ಯೆಹೋವನೇ, ನನ್ನ ಮನಸ್ಸು ಎಡಬಿಡದೆ ನಿನ್ನನ್ನು ಕೀರ್ತಿಸುತ್ತಿರುವದು; ನನ್ನ ದೇವರೇ, ನಿನ್ನನ್ನು ಸದಾಕಾಲವೂ ಸ್ತುತಿಸುವೆನು"** (ಕೀರ್ತ. 30:11–12). **"ಯೆಹೋವನೇ, ನನ್ನ ಶತ್ರುಗಳು ಸಂತೋಷಿಸುವದಕ್ಕೆ ಅವಕಾಶಕೊಡದೆ ನನ್ನನ್ನು ಉದ್ಧರಿಸಿದ್ದರಿಂದ ನಿನ್ನನ್ನು ಕೊಂಡಾಡುವೆನು. ಯೆಹೋವನೇ, ನನ್ನ ದೇವರೇ, ನಿನಗೆ ಮೊರೆಯಿಡಲು ನನ್ನನ್ನು ಸ್ವಸ್ಥಮಾಡಿದಿ. ಯೆಹೋವನೇ, ನನ್ನ ಪ್ರಾಣವನ್ನು ಪಾತಾಳದಿಂದಲೂ ಎತ್ತಿದಿಯಲ್ಲಾ; ನನ್ನನ್ನು ಸಮಾಧಿಯಲ್ಲಿ ಸೇರಗೊಡದೆ ಬದುಕಿಸಿದಿಯಲ್ಲಾ"** (ಕೀರ್ತ. 30:1–2).

6) **ನೂತನ ಸೃಷ್ಟಿಯನ್ನಾಗಿ ನಮ್ಮನ್ನು ಮಾರ್ಪಡಿಸುವನು** : ಕರ್ತನು ನಮ್ಮನ್ನು ನೂತನ ವ್ಯಕ್ತಿಯನ್ನಾಗಿ ಮಾರ್ಪಡಿಸುವನು. ಕ್ರಿಸ್ತೀಯ ಜೀವಿತದಲ್ಲಿ ಜಯದ ಜೀವಿತ ನಡೆಸದೆ ಸೋತು ಹೋಗಿರುವುದಾದರೆ ಕರ್ತನು ನಮಗೆ ಜಯವನ್ನು ಕೊಟ್ಟು ನಡೆಸುವನು.

**ದೇವರು ನಮ್ಮಲ್ಲಿ ಮಾಡುವ ಹೊಸಕಾರ್ಯಗಳು :–**

1. ನಮ್ಮನ್ನು ಮಾರ್ಪಡಿಸುವನು (ಬದಲಾಯಿಸುವನು) (1 ಸಮು. 10:6).
2. ನಮಗೆ ಹೊಸ ಹೃದಯ ಕೊಡುವನು (1 ಸಮು. 10:9).
3. ಶುದ್ಧ ಹೃದಯ ಕೊಡುವನು (ಕೀರ್ತ. 51:10).
4. ಹೊಸ ನಾಲಿಗೆ ಕೊಡುವನು (ಯೆಶಾ. 6:7).
5. ನೂತನ ಸ್ವಭಾವ ಉಂಟುಮಾಡುವನು (ಯೆಹೆ. 11:19–20, ಎಫೆ. 4:22–23).
6. ನೂತನ ಆತ್ಮವನ್ನು ಅನುಗ್ರಹಿಸುವನು (ಯೆಹೆ.36:25–27).
7. ಹೊಸತನದ ಜೀವಿತವನ್ನು ಕೊಡುವನು (ರೋಮ. 6:4).
8. ಹೊಸ ಕೃಪೆಯನ್ನು ಕೊಡುವನು (ಪ್ರಲಾ. 3:21–23).
9. ನೂತನ ಕೀರ್ತನೆ ಉಂಟುಮಾಡುವನು (ಕೀರ್ತ. 149:1, ಕೀರ್ತ. 40:3).

7) **ನಮಗಾದ ಅವಮಾನಕ್ಕೆ 2 ರಷ್ಟು ಮಾನವನ್ನು ಅನುಗ್ರಹಿಸುವನು** (ಯೆಶಾ.61:7) :– ಯೋಬನು ಎಲ್ಲವನ್ನು ಕಳಕೊಂಡು ಸ್ನೇಹಿತರಿಂದಲೂ, ಎಲ್ಲರಿಂದಲೂ ಅವಮಾನಿತನಾದನು. ಕೊನೆಗೆ ದೇವರ ಕೃಪೆಯಿಂದ ಯೋಬ. 42:10 ರ ಪ್ರಕಾರ 2ರಷ್ಟು ಪ್ರತಿಫಲ ಹೊಂದಿದನು. ಯೆಹೂದ್ಯನಾದ ಮೊರ್ದೆಕೈಯನ್ನು ದುಷ್ಟ ಹಾಮಾನನು ಅವಮಾನಪಡಿಸಿದ್ದಲ್ಲದೆ ಗಲ್ಲಿಗೇರಿಸಲು ಸಿದ್ಧನಾದನು. ಕರ್ತನು ಯೆಹೂದ್ಯನಾದ ಮೊರ್ದೆಕೈಯನ್ನು ಕೊನೆಯಲ್ಲಿ ಸನ್ಮಾನಿಸಿ ಹಾಮಾನನ ಸ್ಥಾನಮಾನಗಳೆಲ್ಲಾ ಅವನಿಗೆ ದೊರಕಿದವು. ಹಾಮಾನನು ಮೊರ್ದೆಕೈ ಸ್ಥಳದಲ್ಲಿ ಗಲ್ಲಿಗೇರಿಸಲ್ಪಟ್ಟನು. ಮೊರ್ದೆಕೈ ಮತ್ತು ಯೋಬನನ್ನು ಉದ್ಧರಿಸಿದ ದೇವರು ನಮ್ಮೆಲ್ಲರ ದೇವರಾಗಿದ್ದಾನೆ. ಆತನು ನಮ್ಮೆಲ್ಲರನ್ನು ಉದ್ಧರಿಸಿ ಆಶೀರ್ವದಿಸುವನು. **"ಸುನಿರೀಕ್ಷೆಯುಂಟಾದ ಸೆರೆಯವರೇ, ನಿಮ್ಮ ದುರ್ಗಕ್ಕೆ ಹಿಂದಿರುಗಿರಿ; ನಿಮಗೆ ಎರಡರಷ್ಟು [ಸುಖವನ್ನು] ದಯಪಾಲಿಸುವೆನು ಎಂದು ಈಗಲೂ ಪ್ರಕಟಿಸುತ್ತೇನೆ"** (ಜೆಕ. 9:12). **"ಹೆದರಬೇಡ, ನಿನಗೆ ಅವಮಾನವಾಗುವದಿಲ್ಲ, ನಾಚಿಕೆಪಡದಿರು, ನಿನಗೆ ಆಶಾಭಂಗವಾಗದು; ಯೌವನದಲ್ಲಿ ನಿನಗಾದ ಅವಮಾನವನ್ನು ಮರೆತುಬಿಡುವಿ, ವೈಧವ್ಯದಲ್ಲಿ ನಿನಗೆ ಸಂಭವಿಸಿದ ನಿಂದೆಯು ಇನ್ನು ನಿನ್ನ ನೆನಪಿಗೆ ಬಾರದು"** (ಯೆಶಾ. 54:4).

**ಪಾ॥ ಸುನಿಲ್ ಜಾನ್ ಡಿ'ಸೋಜಾ**

**ವಿಶೇಷ ಸೂಚನೆ**

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820200781, 9902334941, 9964070654, 08202559712.**

ಯಾಕೋಬ್ಯರೇ ನಿಮ್ಮ ಡೇರೆಗಳು ಎಷ್ಟೋ ಚೆಲುವಾಗಿವೆ. ಇಸ್ರಾಯೇಲ್ಯರೇ ನಿಮ್ಮ ನಿವಾಸಗಳು ಎಷ್ಟೋ ರಮ್ಯವಾಗಿವೆ (ಅರಣ್ಯ. 24:5).

## ವಿಶ್ವಾಸದಮನೆಗೆ ಭೇಟಿ ನೀಡಿದವರ ಅನಿಸಿಕೆಗಳು :

ಯೇಸುಪುರ, ಶಂಕರಪುರ, ವಿಶ್ವಾಸದಮನೆ ಬಗ್ಗೆ ದಿನಪತ್ರಿಕೆಯಲ್ಲಿ ಓದಿ ತಿಳಿದಿದ್ದೇವು ಆದರೆ ಈ ದಿನ ಇಲ್ಲಿಗೆ ಬಂದು ಕಣ್ಣಾರೆ ಕಾಣುವ ಅವಕಾಶ ಸಿಕ್ಕಿತು.

ಇಲ್ಲಿಯ ವಾತಾವರಣ ತುಂಬಾ ಚೆನ್ನಾಗಿದೆ. ಮಾನಸಿಕ ಅಸ್ವಸ್ಥರು ದೇವರ ಪ್ರಸನ್ನತೆಯಲ್ಲಿ ಸಂತೋಷವಾಗಿಯೂ ನೆಮ್ಮದಿಯಾಗಿಯೂ ಇದ್ದಾರೆ. ಸತ್ಯ ದೇವರ ಪ್ರೀತಿಯನ್ನು ಅನುಭವಿಸಿದಾಗ ಅವರು ಈ ರೀತಿಯ ಮಾನಸಿಕ ರೋಗಿಗಳ ಸೇವೆಯನ್ನು ಅತೀ ಆಸ್ತಕಿಯಿಂದಲೂ, ಪ್ರೀತಿಯಿಂದಲೂ, ತಾಳ್ಮೆಯಿಂದಲೂ ಮಾಡಲು ಸಾಧ್ಯ. ಸ್ವಚ್ಛತೆಯ ಬಗ್ಗೆ ಎರಡು ಮಾತಿಲ್ಲ. ಎಲ್ಲವೂ ಕ್ರಮವಾಗಿದೆ. ವ್ಯಕ್ತಿಗಳ ಮುಂಚಿನ ಸ್ಥಿತಿ ಹೇಗಿತ್ತು ಎಂದು ಅವರ ಭಾವಚಿತ್ರವೇ ತಿಳಿಸುತ್ತದೆ. ಅಂಥವರನ್ನು ಈ ಸ್ಥಿತಿಗೆ ತಲುಪಿಸಲು ಇಲ್ಲಿಯ ಸಿಬ್ಬಂದಿವರ್ಗದವರ ಹಾಗೂ ಆಡಳಿತ ಮಂಡಳಿಯ ಪರಿಶ್ರಮ ತುಂಬಾಯಿದೆ. ಅದನ್ನು ಎಷ್ಟು ಶ್ಲಾಘಿಸಿದರೂ ಸಾಲದು. ತುಂಬಾ ತಾಳ್ಮೆಯಿಂದ ಸೇವೆಯು ನಡೆಯುತ್ತಿದೆ. ಈ ಎಲ್ಲಾದರ ಮೇಲೆ ದೇವರ ಹಸ್ತಪಾಲನೆಯಿದೆ. ಕರುಣಾಮಯಿಯಾದ ದೇವರು ಈ ಸೇವೆಗೆ ತಕ್ಕ ಪ್ರತಿಫಲವನ್ನು ಕೊಡುವನು. (1 ಕೊರಿ. 15:58). ಪ್ರಾರ್ಥನೆಯೊಂದಿಗೆ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಪಾ॥ ಅಂತೋನಿ. ಆರ್. ಹಾಗೂ ಪಾ॥ ಜೆರಾಲ್ಡ್, ಬೆಳ್ತಂಗಡಿ.**




## ನಮ್ಮೊಂದಿಗೆ ಆಚರಿಸಿ



**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**



**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ನಿಮ್ಮನ್ನೂ, ನಮ್ಮನ್ನೂ ಒಂದು ಮಾಡಿದವನಾದ
ಆತನೇ ನಮಗೆ ಸಮಾಧಾನ ಕರ್ತೃವಾಗಿದ್ದಾನೆ (ಎಫೆ. 2:14).

# ಆರೋಗ್ಯ ಸ್ವರ



● ಸೌಂದರ್ಯಕ್ಕಾಗಿ ಜನರು ಸಮರವನ್ನೇ ನಡೆಸುತ್ತಿರುತ್ತಾರೆ. ಆದರೂ ಮುಖದ ಕಥೆ ಅಷ್ಟೇ, ಅದರಲ್ಲೂ ಮೊಡವೆಗಳು ಮೋಹ ಬಿಡದೆ ಮನುಷ್ಯನನ್ನು ಇನ್ನಿಲ್ಲದಂತೆ ಮಾಗಿಸುತ್ತವೆ. ಆಯಿಲ್ ಸ್ಕಿನ್, ಡೆಡ್ ಸ್ಕಿನ್, ಬ್ಯಾಕ್ಟೀರಿಯಾಗಳಿಂದ ಮುಖದಲ್ಲಿ ವೈಟೆಡ್‌ಗಳಾಗಿ ಸೌಂದರ್ಯಕ್ಕೇ ಕುಂದುಂಟಾಗುತ್ತದೆ. ಮುಖದ ಮೇಲ್ಮೈ ಚರ್ಮವನ್ನು ಗಂಟುಗಂಟುಗಳಾಗಿಸುತ್ತದೆ. ಹೆಚ್ಚಾಗಿ ಇದು ಕಪಾಳ, ಮೂಗಿನ ಸುತ್ತ, ಕಣ್ಣುಬ್ಬಿನ ಕೆಳಗೆ ಕಾಣಿಸುತ್ತದೆ. ಮೊಡವೆಗಳು, ಬ್ಲ್ಯಾಕೆಡ್ ಹಾಗೂ ವೈಟೆಡ್‌ಗಳು ಮುಖಕ್ಕೆ ಕಪ್ಪು ಚುಕ್ಕೆಗಳಾಗುವುದರಲ್ಲಿ ಅನುಮಾನವೇ ಇಲ್ಲ.

ಆಯಿಲ್ ಸ್ಕಿನ್ ಇದ್ದವರಿಗೆ ವೈಟೆಡ್ ಕಾಟ ಹೆಚ್ಚಾಗಿರುತ್ತದೆ. ಇಂಥವುಗಳನ್ನು ವೈಟ್‌ವಾಶ್ ಮಾಡುವುದಕ್ಕಿದೆ ಮನೆಯಲ್ಲೇ ಕೆಲವು ಮದ್ದುಗಳು.....

- ನೈಸರ್ಗಿಕವಾಗಿ ವೈಟೆಡ್‌ಗಳಿಂದ ಮುಕ್ತಿ ಹೊಂದಲು ಟಬ್‌ವೊಂದರಲ್ಲಿ ಕುದಿಯುವ ನೀರಿಗೆ ಮುಖವೊಡ್ಡಿ. ಚೆನ್ನಾಗಿ ಬೆವರಿದ ಮುಖವನ್ನು ಕಾಟನ್ ಬಟ್ಟೆಯಿಂದ ಒರೆಸುತ್ತಿದ್ದರೆ, ಕ್ರಮೇಣ ವೈಟೆಡ್‌ಗಳು ಗುಡ್‌ಬೈ ಹೇಳುತ್ತವೆ.
- ಅಕ್ಕಿ ಹಿಟ್ಟಿನ ಪೇಸ್ಟ್ ಮಾಡಿ, ನೀರಿನಿಂದ ಉಜ್ಜಿ ತೊಳೆದರೆ ಆಯಿಲ್ ಸ್ಕಿನ್ ಜತೆ, ವೈಟೆಡ್‌ಗಳಿಗೂ ಮುಕ್ತಿ ನೀಡಬಹುದು.
- ಎರಡು ಚಮಚ ಹಾಲಿನೊಂದಿಗೆ, ಅಷ್ಟೇ ಪ್ರಮಾಣದ ನಿಂಬೆಹಣ್ಣಿನ ರಸ ಹಾಗೂ ಒಂದು ಚಮಚ ಉಪ್ಪನ್ನು ಬೆರೆಸಿ ಮುಖಕ್ಕೆ ಹಚ್ಚಿ. ನಂತರ ನೀರಿನಲ್ಲಿ ತೊಳೆಯಿರಿ.
- ಡಲ್ ಸ್ಕಿನ್ ಹಾಗೂ ಮೊಡವೆ ಇರುವವರು ಟೊಮೆಟೋ ರಸದಿಂದ ಮುಖ ತೊಳೆದುಕೊಳ್ಳುವುದರಿಂದ ಮುಖ ಕಾಂತಿಯುತವಾಗುತ್ತದೆ. ಇವು ಬ್ಲ್ಯಾಕ್ ಮತ್ತು ವೈಟೆಡ್‌ಗಳನ್ನೂ ಹೊಡೆದೋಡಿಸಬಹುದು.
- ಟೂತ್‌ಫೇಸ್ಟ್ ಕೇವಲ ಹಲ್ಲಿನ ಸೌಂದರ್ಯವನ್ನಷ್ಟೇ ಅಲ್ಲ, ಚರ್ಮದ ಕಾಂತಿಯನ್ನೂ ಹೆಚ್ಚಿಸಬಲ್ಲದು. ಟೂತ್‌ಪೇಸ್ಟನ್ನು ವೈಟೆಡ್‌ಗಳಿರುವಲ್ಲಿ ಹಚ್ಚುವುದರಿಂದ ಮುಖದ ಚರ್ಮ ಮೃದುವಾಗುವುದಲ್ಲದೆ, ಕಾಂತಿಯುತವಾಗುತ್ತದೆ.
- ಬೇಯಿಸಿದ ಆಲೂಗಡ್ಡೆ ಪೇಸ್ಟ್‌ಅನ್ನು ಮುಖಕ್ಕೆ ಹಚ್ಚಿ, ಅರ್ಧ ಗಂಟೆ ನಂತರ ತೊಳೆದರೆ ವೈಟೆಡ್‌ಗಳ ಜನ್ಮ ಜಾಲಾಡಬಹುದು. ಇದರಿಂದ ತ್ವಚೆಯು ಕಾಂತಿಯುಕ್ತವಾಗುತ್ತದೆ.
- ಜೇನುತುಪ್ಪ ಮತ್ತು ಮೊಟ್ಟೆ ಬೆರೆಸಿದ ಪೇಸ್ಟ್ ಸಹ ಅತ್ಯಂತ ಪರಿಣಾಮಕಾರಿ. ಜೇನು ತುಪ್ಪದಲ್ಲ ಆ್ಯಂಟಿ ಬ್ಯಾಕ್ಟೀರಿಯಾ ಹಾಗೂ ಮೊಟ್ಟೆಯಲ್ಲಿ ಮುಖದ ರಂಧ್ರ ಹಾಗೂ ಮೊಡವೆಗಳನ್ನು ಹೋಗಲಾಡಿಸುವ ಗುಣವಿದೆ. ಇವೆರಡರ ಕಾಂಬಿನೇಷನ್ ಆರೋಗ್ಯಕರ ಮತ್ತು ಕಾಂತಿಯುತ ಮುಖದ ತ್ವಚೆಗೆ ಸಹಕಾರಿ.

**ಚಳಿಗಾಲದಲ್ಲಿ ಚರ್ಮ ಚಿಕಿತ್ಸೆ :–** ಚಳಿಗಾಲದಲ್ಲಿ ಚರ್ಮವನ್ನು ಅದೆಷ್ಟೇ ಆರೈಕೆ ಮಾಡಿದರೂ ಕಾಂತಿ ಕಳೆದುಕೊಳ್ಳುವುದು ಸಹಜ. ಕೆಲವು ಕ್ರೀಂಗಳನ್ನು ಬಳಸಿದರಂತೂ ಇರುವ ಕಾಂತಿಯನ್ನೂ ಚರ್ಮ ಕಳೆದುಕೊಳ್ಳುತ್ತದೆ. ಹಾಗಾದರೆ ಇದರ ಒಟ್ಟಾರೆ ರಕ್ಷಣೆಗೆ ಏನಿದೆ ಮನೆ ಮದ್ದು?

- ಪಪ್ಪಾಯಿ, ಮಾವು, ಬಾಳೆಹಣ್ಣಿನ ಸಿಪ್ಪೆಗಳಿಂದ ಮುಖವನ್ನು ಚೆನ್ನಾಗಿ ಮಸಾಜ್ ಮಾಡಿ.
- ಮೊಣಕೈ ಮೊಣಕಾಲು ಕಪ್ಪಾಗಿದ್ದರೆ ನಿಂಬೆಹಣ್ಣಿನ ರಸ ಹಿಂಡಿದ ನಂತರ ಸಿಪ್ಪೆಯನ್ನು ಎಸೆಯದೇ, ಕಪ್ಪಾದ ಭಾಗಕ್ಕೆ ಮಸಾಜ್ ಮಾಡಿ.
- ಮಲ್ಲಿಗೆ ಜಾಜಿ ಮುಂತಾದ ಸುವಾಸನಾಭರಿತ ಹೂಗಳನ್ನು ಒಣಗಿದ ನಂತರ ಎಸೆಯುವ ಬದಲು ಒಣಗಿದ ನಿಂಬೆ ಸಿಪ್ಪೆ, ಕಿತ್ತಳೆ ಹಣ್ಣಿನ ಸಿಪ್ಪೆಯ ಪುಡಿಯೊಂದಿಗೆ ಹೆಸರುಹಿಟ್ಟು ಹಾಗೂ ಕಡಲೆಹಿಟ್ಟು ಸೇರಿಸಿ ವಾರಕ್ಕೊಮ್ಮೆ ಮುಖಕ್ಕೆ ಲೇಪಿಸಿ ಐದು ನಿಮಿಷದ ನಂತರ ತೊಳೆಯಿರಿ. ನಿತ್ಯ ಮುಖ ತೊಳೆಯುವುದಕ್ಕೂ ಈ ಪುಡಿಯನ್ನು ಬಳಸಬಹುದು.

ಸಂಗ್ರಹ.

ಯೆಹೋವನು ನಿಮ್ಮನ್ನು ಪ್ರೀತಿಸಿ, ತಾನು ನಿಮ್ಮ ಪಿತೃಗಳಿಗೆ ಮಾಡಿದ ಪ್ರಮಾಣವನ್ನು ನೆರವೇರಿಸಬೇಕೆಂದು ನಿಮ್ಮನ್ನು ಬಿಡುಗಡೆ ಮಾಡಿದನು (ಧರ್ಮೋ. 7:8).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

---

## ನಿಮ್ಮಗೆಲ್ಲಾ ಸಂತಸ ಸುದ್ಧಿ

# VOICE OF GOD
## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

---

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

ಮಹತ್ಕಾರ್ಯಗಳನ್ನು ನಡಿಸುವದಕ್ಕೆ ಆತನೊಬ್ಬನೇ ಶಕ್ತನು.
ಆತನ ಕೃಪೆಯು ಶಾಶ್ವತವಾದದ್ದು (ಕೀರ್ತ. 136:4).

# ಸ್ಥಳೀಯ ಮತ್ತು ವಿದೇಶ ಸುದ್ದಿ

- ದೇಶದಲ್ಲೇ ಮೊದಲ ಬಾರಿಗೆ ಮೊಬೈಲ್ ಮೂಲಕ ಸರಕಾರದ ನಾನಾ ಸೇವೆಗಳು ಜನಸಾಮಾನ್ಯರಿಗೆ ಲಭ್ಯವಾಗಲಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುವ ಭಾಗ್ಯ ಕರ್ನಾಟಕದ್ದಾಗಲಿದೆ.

- ಎನ್‌ಡಿಎ ಸರ್ಕಾರದ "ಭಾರತದಲ್ಲಿ ತಯಾರಿಸು" ಯೋಜನೆಯಲ್ಲಿ ಕೈಜೋಡಿಸುವಂತೆ ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರು ನಾರ್ವೆಯ ಹೂಡಿಕೆದಾರರು ಮತ್ತು ಸಾಹಸೋದ್ಯಮಿಗಳಿಗೆ ಆಹ್ವಾನ ನೀಡಿದ್ದಾರೆ. ಇದರ ಕುರಿತಾಗಿ ನಡೆದ ಮಾತುಕತೆಯ ವೇಳೆಯಲ್ಲಿ ಭಾರತದಲ್ಲಿನ ನಾರ್ವೆ ಕಂಪನಿಗಳಲ್ಲಿ ಹೂಡಿಕೆ ಮಾಡುವವರಿಗೆ ನೆರವು ನೀಡುವುದಾಗಿ ಅಲ್ಲಿನ ಸರ್ಕಾರ ಭರವಸೆ ನೀಡಿದೆ.

- ದೂರ ಸಂಪರ್ಕ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಭಾರತ ಬಲವಾದ ಹೆಜ್ಜೆಯನ್ನಿರಿಸಿದೆ. 48 ಟ್ರಾನ್ಸ್ ಪಾಂಡರ್‌ಗಳನ್ನು ಹೊತ್ತ ಜಿಸ್ಯಾಟ್–16 ಉಪಗ್ರಹ ಫ್ರೆಂಚ್ ಗಯಾನಾದ ಕೌರೋ ಉಪಗ್ರಹ ಉಡಾವಣಾ ಕೇಂದ್ರದಿಂದ ಭಾರತೀಯ ಕಾಲಮಾನ ಮಧ್ಯರಾತ್ರಿ 2.10ಕ್ಕೆ ನಭಕ್ಕೆ ಜಿಗಿಯಿತು.

- ಅಪ್ರಾಪ್ತ ಯುವತಿಯೊಂದಿಗೆ ಮನೆಬಿಟ್ಟು ಓಡಿ ಹೋಗಿ, ಆಕೆ ಪ್ರಾಪ್ತಳಾದ ನಂತರ ವಿವಾಹವಾದ ಮಾತ್ರಕ್ಕೆ ಅಪಹರಣ ಪ್ರಕರಣದಿಂದ ಬಚಾವಾಗಬಹುದೆಂಬ ಭ್ರಮೆಯಲ್ಲಿರುವ ಯುವಕರೇ ಎಚ್ಚರ. ಹಾಗೇನಾದರೂ ಆದರೆ, ಶಿಕ್ಷೆಯ ವಿಚಾರದಲ್ಲಿ ರಾಜಿಯೇ ಇಲ್ಲ. ಇಂತಹ ಘಟನೆಯಲ್ಲಿ, ಅತ್ಯಾಚಾರ ಹಾಗೂ ಅಪಹರಣದ ಪ್ರಕರಣ ಕೈಬಿಡಲು ಸಾಧ್ಯವಿಲ್ಲ. ಆತ ತನ್ನ ಹಿಂದಿನ ಅಪರಾಧಗಳಿಗೆ ಶಿಕ್ಷಾರ್ಹ ಎಂದು ನ್ಯಾಯಾಲಯ ಮಹತ್ವದ ತೀರ್ಪು ನೀಡಿದೆ.

- ಭಾರತ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿರುವ ಆಟಗಾರರು ಇನ್ನು ಮುಂದೆ ದೇಶಿಯ ಟೂರ್ನಿಗಳಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಲಾಂಛನ, ಕ್ಯಾಪ್ ಅಥವಾ ಜೆರ್ಸಿಯನ್ನು ಬಳಸುವಂತಿಲ್ಲ ಎಂದು ಬಿಸಿಸಿಐ ಸೂಚಿಸಿದೆ.

- ಜಮ್ಮು ಕಾಶ್ಮೀರದಾದ್ಯಂತ ಚಳಿ ಹೆಚ್ಚಾಗಿದ್ದು, ರಾಜಧಾನಿ ಶ್ರೀನಗರ ಸೇರಿ ಹಲವು ಪ್ರದೇಶಗಳಲ್ಲಿ ತಾಪಮಾನ ಮೈನಸ್‌ಗೆ ಇಳಿಕೆಯಾಗಿದೆ. ಲಡಾಕ್‌ನ ಲೇಹ್ ಪ್ರದೇಶದಲ್ಲಿ ಕನಿಷ್ಠ ತಾಪಮಾನ– 10 ಡಿಗ್ರಿ ದಾಖಲಾಗಿದೆ.

- ಭಾರತದ ಅರ್ಥ ವ್ಯವಸ್ಥೆಯನ್ನೇ ಬುಡಮೇಲು ಮಾಡಲು ಹೊರಟಿರುವ ನಕಲಿ ನೋಟುಗಳ ಹಾವಳಿ ತಡೆಯುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿರುವ ಕೇಂದ್ರ ಸರ್ಕಾರ, ನೋಟುಗಳ ನಕಲು ಮಾಡಲು ಸಾಧ್ಯವಾಗದಂತೆ ಹೈಟೆಕ್ ಕರೆನ್ಸಿ ಕಾಗದವನ್ನು ಮೈಸೂರಿನಲ್ಲಿ ತಯಾರಿಸಲು ತೀರ್ಮಾನಿಸಿದೆ.

- ರಕ್ಷಣಾ ಇಲಾಖೆಗೆ ಸೇರಿದ ಒಟ್ಟು ರೂ. 80 ಸಾವಿರ ಕೋಟಿ ವೆಚ್ಚದ ಯೋಜನೆಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಆರು ಜಲಾಂತರ್ಗಾಮಿಗಳನ್ನು ದೇಶೀಯವಾಗಿ ನಿರ್ಮಿಸಲು ತೀರ್ಮಾನಿಸಿದ್ದು ಇದಕ್ಕಾಗಿ ರೂ. 50 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತದೆ.

- ಜಪಾನ್‌ನ ಅತ್ಯುನ್ನತ ಪುರಸ್ಕಾರವಾದ 'ದ ಗ್ರಾಂಡ್ ಕಾರ್ಡನ್ ಆಫ್ ದ ಆರ್ಡರ್ ಆಫ್ ದ ಪೌಲೋವ್ನಿಯಾ ಫ್ಲವರ್ಸ್' ರಾಷ್ಟ್ರೀಯ ಪ್ರಶಸ್ತಿಯನ್ನು ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ಗೆ ನೀಡಲು ನಿರ್ಧರಿಸಲಾಗಿದೆ.

- ಮುಸ್ಲಿಂ ಪ್ರಾಬಲ್ಯದ ಕ್ಸಿನ್‌ಜಿಯಾಂಗ್ ಪ್ರದೇಶದಲ್ಲಿ ಕಳೆದ ಜುಲೈನಲ್ಲಿ ನಡೆದ ದಾಳಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಚೀನಾದ ನ್ಯಾಯಲಯ ಒಟ್ಟು 27 ಅಪರಾಧಿಗಳಿಗೆ ಮರಣದಂಡನೆ ವಿಧಿಸಿದೆ.

- ಬ್ರಿಟನ್ನಿನ ಲೋಹಶೋಧಕ ಡೆರಿಕ್ ಮೆಕ್‌ಲೆನಾನ್ ಭಾರಿ ನಿಧಿಯೊಂದನ್ನು ಪತ್ತೆ ಮಾಡಿದ್ದಾರೆ. ಸ್ಕಾಟ್ಲೆಂಡ್‌ನ ಚರ್ಚ್ ಇದ್ದ ಜಾಗದಲ್ಲಿ ಈ ನಿಧಿ ಪತ್ತೆಯಾಗಿದ್ದು, ಈ ಸ್ಥಳದಲ್ಲಿ ಕರೊಲಿಂಗಿಯನ್ ರಾಜರ ಕಾಲದ ಬೃಹತ್ ಬೆಳ್ಳಿ ಪಾತ್ರೆ, ನೂರಕ್ಕೂ ಹೆಚ್ಚು ಕಲಾಕೃತಿಗಳು, ಬೆಳ್ಳಿ ಶಿಲುಬೆಗಳು ದೊರೆತಿವೆ. ಇವು ಸುಮಾರು 1,200 ವರ್ಷಗಳಷ್ಟು ಪುರಾತನವಾದದ್ದು ಎನ್ನಲಾಗಿದೆ.

ನನ್ನನ್ನು ಪ್ರೀತಿಸಿ ನನ್ನ ಆಜ್ಞೆಗಳನ್ನು ಕೈಕೊಳ್ಳುವವರಿಗೋ ಸಾವಿರ ತಲೆಗಳವರೆಗೆ ದಯೆ ತೋರಿಸುವವನಾಗಿಯೂ ಇದ್ದೇನೆ (ವಿಮೋ. 20:6).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ದೇವರ ಧರ್ಮೋಪದೇಶವು ಅವನ ಹೃದಯದಲ್ಲಿರುವುದು ಅವನು ಜಾರುವುದೇ ಇಲ್ಲ"** (ಕೀರ್ತ. 37:31).

ದೇವರ ವಾಕ್ಯ ನಮ್ಮ ಹೃದಯದಲ್ಲಿ ಇಲ್ಲದಿದ್ದರೆ (ದೇವರ ವಾಕ್ಯದ ಸರಿಯಾದ ತಿಳುವಳಿಕೆ ಇಲ್ಲದಿದ್ದರೆ ಏನು ಆಗುತ್ತದೆ ?

1) **ಆತ್ಮೀಕ ಸಾವು** :– "ಸದುಪದೇಶದ ಕೊರತೆಯಿಂದಲೇ ಸಾಯುವನು, ತನ್ನ ಅತಿ ಮೂರ್ಖತನದಿಂದ ಭ್ರಾಂತನಾಗುವನು" (ಜ್ಞಾನೋ. 5:23).

2) ಸೆರೆವಾಸ ಅಂದರೆ ಸೈತಾನನು ನಮ್ಮನ್ನು ಸೆರೆಯಲ್ಲಿ ಇಡುತ್ತಾನೆ, ಬಂಧನದಲ್ಲಿ ಇಡುತ್ತಾನೆ. "ಆದಕಾರಣ ನನ್ನ ಜನರು ಜ್ಞಾನ ಹೀನರಾಗಿ ಸೆರೆಗೆ ಹೋಗುವದು ಖಂಡಿತ; ಘನವಂತರು ಹಸಿಯುವರು, ಸಾಮಾನ್ಯರು ಬಾಯಾರುವರು" (ಯೆಶಾ. 5:13).

3) **ತಿಳುವಳಿಕೆಯಿಲ್ಲದೆ ದೇವರನ್ನು ಸರಿಯಾಗಿ ಅರ್ಥಮಾಡಲು ಸೋತು ಹೋಗುತ್ತೇವೆ. "ಆಕಾಶಮಂಡಲವೇ, ಆಲಿಸು! ಭೂಮಂಡಲವೇ, ಕೇಳು! ಯೆಹೋವನ ಮಾತಾಡುತ್ತಿದ್ದಾನೆ; ನಾನು ಸಾಕಿ ಸಲಹಿದ ಮಕ್ಕಳೇ ನನಗೆ ದ್ರೋಹಮಾಡಿದ್ದಾರೆ. ಎತ್ತು ಯಜಮಾನನನ್ನು, ಕತ್ತೆ ಒಡೆಯನ [ಕೊಟ್ಟಿಗೆಯ] ಗೋದಲಿಯನ್ನು ತಿಳಿದಿರುವವು; ಇಸ್ರಾಯೇಲ್ ಜನರಿಗೋ ತಿಳುವಳಿಕೆಯಿಲ್ಲ, ನನ್ನ ಪ್ರಜೆಯು ಆಲೋಚಿಸುವದಿಲ್ಲ. ಪಾಪಿಷ್ಟಜನವೇ, ಅಧರ್ಮಭಾರಹೊತ್ತಿರುವ ಪ್ರಜೆಯೇ, ದುಷ್ಟಜಾತಿಯೇ, ದ್ರೋಹಿಗಳಾದ ಮಕ್ಕಳೇ, ನಿಮ್ಮ ಗತಿಯನ್ನು ಏನು ಹೇಳಲಿ! ಯೆಹೋವನನ್ನು ತೊರೆದಿದ್ದಾರೆ, ಇಸ್ರಾಯೇಲ್ಯರ ಸದಮಲಸ್ವಾಮಿಯನ್ನು ಧಿಕ್ಕರಿಸಿದ್ದಾರೆ, ಆತನಿಗೆ ಬೆನ್ನುಮಾಡಿ ಬೇರೆಯಾಗಿದ್ದಾರೆ"** (ಯೆಶಾ.1:2–4).

4) **ದೇವರ ವಾಕ್ಯ ಹೃದಯದಲ್ಲಿ ಇಲ್ಲದ ಕಾರಣ** : ಪ್ರೀತಿ ಸತ್ಯತೆ ಮತ್ತು ಒಂದು ಪರಿಶುದ್ಧವಾದ ಸಾಕ್ಷಿಯ ಜೀವನ ಇಲ್ಲ. **"ಇಸ್ರಾಯೇಲ್ಯರೇ, ಯೆಹೋವನ ವಾಕ್ಯವನ್ನು ಕೇಳಿರಿ; ಯೆಹೋವನು ದೇಶನಿವಾಸಿಗಳ ಮೇಲೆ ವಿವಾದ ಹಾಕಿದ್ದಾನೆ. ಏಕಂದರೆ ಪ್ರೀತಿ ಸತ್ಯತೆ ದೇವ ಜ್ಞಾನಗಳು ದೇಶದಲ್ಲಿಲ್ಲ; ಸುಳ್ಳುಸಾಕ್ಷಿ, ನರಹತ್ಯ, ಕಳ್ಳತನ, ವ್ಯಭಿಚಾರ, ಇವುಗಳೇ ನಡೆಯುತ್ತವೆ; ದೊಂಬಿಗಳು ಆಗುತ್ತಲಿವೆ, ದೇಶವೆಲ್ಲಾ ರಕ್ತಮಯವಾಗಿದೆ"** (ಹೋಶೆ. 4:1–2).

5) **ಜ್ಞಾನಹೀನತೆಯ ಕಾರಣ ದೇವ ಜನರು ಹಾಳಾಗುತ್ತಾರೆ:– "ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ; ನೀವು ಜ್ಞಾನವನ್ನು ತಳ್ಳಿಬಿಟ್ಟದ್ದರಿಂದ ಇನ್ನು ನನಗೆ ಯಾಜಕ ಸೇವೆ ಮಾಡದಂತೆ ನಾನು ನಿಮ್ಮನ್ನು ತಳ್ಳಿಬಿಡುವೆನು; ನೀವು ನಿಮ್ಮ ದೇವರ ಧರ್ಮೋಪದೇಶವನ್ನು ಮರೆತ ಕಾರಣ ನಾನು ನಿಮ್ಮ ಸಂತತಿಯವರನ್ನು ಮರೆಯುವೆನು"** (ಹೋಶೆ. 4:6).

6) **ಮಾರ್ಗತಪ್ಪುತ್ತೇವೆ** :– ಇನ್ನೊಂದು ಗೊತ್ತಿಲ್ಲದ ಹಾದಿಯಲ್ಲಿ ಮುಂದುವರೆಯುತ್ತೇವೆ. **"ಮಾರ್ಗವನ್ನು ಗ್ರಹಿಸಿಕೊಳ್ಳುವದೇ ಜಾಣನ ಜ್ಞಾನ; ಮೂಢರ ಮೂರ್ಖತನ ಮೋಸಕರ"** (ಜ್ಞಾನೋ. 14:8). ಮತ್ತಾ. 22:29 ರಲ್ಲಿ ಅದಕ್ಕೆ ಯೇಸು ಉತ್ತರವಾಗಿ ಅವರಿಗೆ ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾದರೂ ತಿಳಿಯದೆ ತಪ್ಪುವವರಾಗಿದ್ದೀರಿ. ನಾವು ಶಾಸ್ತ್ರವನ್ನು ದೇವರ ಶಕ್ತಿಯನ್ನು ತಿಳಿಯುವಾಗ ತಪ್ಪುವುದೇ ಇಲ್ಲ. ಈ ವಿಚಾರದಲ್ಲಿ ತಿಳುವಳಿಕೆ ಇಲ್ಲದಾಗ ಮತ್ತೆ ಮಾರ್ಗತಪ್ಪುತ್ತೇವೆ. ಮಾರ್ಗತಪ್ಪುವುದು ಅಂದರೆ ಸರಿಯಾದ ಮಾರ್ಗದಿಂದ ತಪ್ಪಿ ತಪ್ಪಾದ ಮಾರ್ಗದಲ್ಲಿ ನಡೆಯುವುದಾಗಿದೆ. ಅನೇಕರು ತಿಳುವಳಿಕೆಯ ಕೊರತೆಯಿಂದ ರಕ್ಷಣೆ ಹೊಂದಿದ ವಿಶ್ವಾಸಿಗಳು ಯೆಹೋವ ಸಾಕ್ಷಿ, ಯೇಸುನಾಮದಂತಹ ದುರ್ಬೋಧನೆಗೆ ಒಳಗಾಗಿ ನಿತ್ಯತ್ವದ ಕುರಿತು ನಿರೀಕ್ಷೆಯನ್ನು ಕಳಕೊಂಡಂತಹ ಸ್ಥಿತಿಯಲ್ಲಿ ಜೀವನ ಮಾಡುತ್ತಿದ್ದಾರೆ.

ದೇವರ ವಾಕ್ಯ ನಮ್ಮನ್ನು ಎಚ್ಚರಿಸುವಂತದ್ದು, "ನೀವು ಕೇಳಿದಂಥ ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಂಥ ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿಹೋಗದೆ ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ ಆ ಪದವಿ ನಿಮಗೆ ಪ್ರಾಪ್ತವಾಗುವದು" (ಕೊಲೊ. 1:23).

7) **ನಮ್ಮ ಜವಾಬ್ದಾರಿಯನ್ನು ಮರೆಯುತ್ತೇವೆ :– "ಕೊಲೆಗೆ ಸೆಳೆಯಲ್ಪಟ್ಟವರನ್ನು ರಕ್ಷಿಸು! ಸಂಹಾರಕ್ಕೆ ಗುರಿಯಾದವರನ್ನು ತಪ್ಪಿಸುವದಿಲ್ಲವೇ. ಇದು ನನಗೆ ಗೊತ್ತಿರಲಿಲ್ಲ ಎಂದು ನೀನು ನೆವ ಹೇಳಿದರೆ ಹೃದಯಶೋಧಕನು ಗ್ರಹಿಸುವದಿಲ್ಲವೋ? ನಿನ್ನ ಆತ್ಮವನ್ನು ಕಾಯುವಾತನು ತಿಳಿಯುವದಿಲ್ಲವೋ? ಪ್ರತಿಯೊಬ್ಬನ ಕರ್ಮಕ್ಕೆ ಪ್ರತಿಫಲವನ್ನು ಕೊಡದೆ ಬಿಟ್ಟಾನೇ?"** (ಜ್ಞಾನೋ. 24:11–12). ಅನೇಕ ಕ್ರೈಸ್ತ ವಿಶ್ವಾಸಿಗಳಿಗೆ ಆತ್ಮೀಕ ಕ್ಷೇತ್ರದಲ್ಲಿ, ಕ್ರೈಸ್ತ ಸಭೆಯಲ್ಲಿ ತಮ್ಮ ಜವಾಬ್ದಾರಿ ಗೊತ್ತಿಲ್ಲದೆ ಇರುವುದಕ್ಕೆ ಇನ್ನೊಂದು ಕಾರಣ ದೇವರ ವಾಕ್ಯದ ತಿಳುವಳಿಕೆಯ ಕೊರತೆಯಾಗಿದೆ.

ಯೆಹೋವನು ತನ್ನ ಪ್ರಜೆಯನ್ನು ಸಂತೈಸಿ ದಿಕ್ಕಿಲ್ಲದ ತನ್ನ ಜನರನ್ನು ಕರುಣಿಸುತ್ತಿದ್ದಾನೆ (ಯೆಶಾ. 49:13).

ಇಂದು ಕ್ರೈಸ್ತ ಸಭೆ ದುರ್ಬೋಧನೆಗಳಿಂದ ಮೋಸ ಹೋಗಲು ಕಾರಣವೇನು ?

1) ಅನೇಕ ಕ್ರೈಸ್ತ ವಿಶ್ವಾಸಿಗಳಿಗೆ ಪಾಪಕ್ಕೆ ಸರಿಯಾಗಿ ಮಾನಸಾಂತರಪಡಲು ಇಷ್ಟವಿಲ್ಲದೆ ಇರುವುದು, ದೇವರ ವಾಕ್ಯ ಎತ್ತಿಹೇಳುವ ಕೆಲವು ಸಂಗತಿಗಳನ್ನು ತೊರೆಯಲು ಮನಸ್ಸು ತೋರಿಸದೇ ಇರುವುದು ಪಾಪವನ್ನು ಖಂಡಿಸುವ, ಗದರಿಸುವ, ಎಚ್ಚರಿಸುವ ಮತ್ತು ತಿದ್ದುವ ದೇವರ ವಾಕ್ಯದ ಮೂಲಕವಾಗಿ ಸರಿಯಾದ ಮಾರ್ಗದರ್ಶನ ಮಾಡುವ ಸೇವಕರನ್ನು ಇಷ್ಟಪಡದೇ ಇರುವುದು. "ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು. ಯಾಕಂದರೆ ಜನರು ಸ್ವಸ್ಥಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ; ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು ಸತ್ಯ ಬೋಧನೆಗೆ ಕಿವಿಗೊಡದೆ ಕಲ್ಪನಾಕಥೆಗಳನ್ನು ಕೇಳುವದಕ್ಕೆ ಹೋಗುವರು" (2 ತಿಮೊ. 4:2–4).

2) ಪಾಪ ಮಾಡುವ ವ್ಯಕ್ತಿಗಳನ್ನು ಖಂಡಿಸದೇ ಅವರಿಗೆ ಆಶೀರ್ವಾದವನ್ನು ಉಪದೇಶಿಸುವುದು. ಸರಿಯಾಗಿ ಪಾಪ ರಹಿತವಾಗಿ ಜೀವನ ಮಾಡಬೇಕೆಂದು ಉಪದೇಶಮಾಡದೇ ಅವರ ಪಾಪದ ಜೀವನ ಕಂಡರೂ ಕಾಣದಂತಿರುವುದು. ಅದಕ್ಕೆ ಒಂದು ಕಾರಣ ಆ ವ್ಯಕ್ತಿಗಳಿಂದ ಬರುವಂತಹ ಕಾಣಿಕೆ ನಿಂತು ಹೋಗಬಹುದೇನೋ ಎಂದಿರಬಹುದು. "ಅಯ್ಯೋ, ಕೆಟ್ಟದ್ದನ್ನು ಒಳ್ಳೇದೆಂದೂ ಒಳ್ಳೇದನ್ನು ಕೆಟ್ಟದ್ದೆಂದೂ ಬೋಧಿಸಿ ಕತ್ತಲನ್ನು ಬೆಳಕೆಂದೂ ಬೆಳಕನ್ನು ಕತ್ತಲೆಂದೂ ಸಾಧಿಸಿ ಕಹಿಯು ಸಿಹಿ, ಸಿಹಿಯು ಕಹಿ ಎಂದು ಸ್ಥಾಪಿಸುವವರ ಗತಿಯನ್ನು ಏನೆಂದು ಹೇಳಲಿ! ಅಯ್ಯೋ, ತಮ್ಮಲ್ಲಿ ತಾವೇ ಜ್ಞಾನಿಗಳೆಂದೂ ಸ್ವಂತ ಗಣನೆಯಲ್ಲಿ ವಿವೇಕಿಗಳೆಂದೂ ಭಾವಿಸಿಕೊಳ್ಳುವವರ ಪಾಡು ಏನು ಹೇಳಲಿ! ಅಯ್ಯೋ, ಸುರಾಪಾನದಲ್ಲಿ ಶೂರರೂ ಮದ್ಯಮಿಶ್ರಣದಲ್ಲಿ ಸಾಹಸಿಗಳೂ ಆಗಿ ಲಂಚಕ್ಕೋಸ್ಕರ ದೋಷಿಗಳನ್ನು ನಿರ್ದೋಷಿಗಳೆಂದು ತೀರ್ಪುಮಾಡಿ ನ್ಯಾಯವಂತರ ನ್ಯಾಯವನ್ನು ಹಾಳುಮಾಡುವವರ ಗತಿಯನ್ನು ಏನೆಂದು ಹೇಳಲಿ! ಅವರು ಸೇನಾಧೀಶ್ವರನಾದ ಯೆಹೋವನ ಉಪದೇಶವನ್ನು ನಿರಾಕರಿಸಿ ಇಸ್ರಾಯೇಲ್ಯರ ಸದಮಲಸ್ವಾಮಿಯ ವಾಕ್ಯವನ್ನು ಅಸಡ್ಡೆ ಮಾಡಿದ್ದರಿಂದ ಅಗ್ನಿಯ ನಾಲಿಗೆಗಳು ಒಣಕೂಳೆಯನ್ನು ನುಂಗಿಬಿಡುವ ಹಾಗೂ ಒಣಹುಲ್ಲು ಬೆಂಕಿಯಲ್ಲಿ ಕುಗ್ಗುವಂತೆಯೂ ಅವರ ಬೇರು ಕೊಳೆತು ಅವರ ಹೂವು ದೂಳಾಗಿ ತೂರಿಹೋಗುವದು" (ಯೆಶಾ. 5:20–24).

3) ಕರ್ತನಾದ ಯೇಸುಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯ ಮತ್ತು ಪ್ರಪಂಚದ ಬಾಲ ಬೋಧನೆಯನ್ನು ಅನುಸರಿಸುವ ವ್ಯಕ್ತಿಗಳು. ಕರ್ತನಾದ ಯೇಸುಕ್ರಿಸ್ತನನ್ನು ಯಾರು ಅನುಸರಿಸುವುದಿಲ್ಲವೋ ಅವರ ಮೂಲಕವಾಗಿ ದುರ್ಬೋಧನೆ ಹೊರಡುತ್ತದೆ. "ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನೂ ಪ್ರಾಪಂಚಿಕ ಬಾಲಬೋಧೆಯನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನ ಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರಿ" (ಕೊಲೊ. 2:8).

ದುರ್ಬೋಧಕರ ಜೀವನದಲ್ಲಿ ಸಾಕ್ಷಿ ಎಂಬುದು ಇಲ್ಲ. ಅವರಿಗೆ ಕ್ರಿಸ್ತನನ್ನು ಅನುಸರಿಸಬೇಕು, ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಡೆಯಬೇಕು ಎಂದು ಯಾವುದೇ ವಿಧವಾದ ಆಸೆಯಾಗಲಿ, ದಾಹವಾಗಲಿ, ಗುರಿಯಾಗಲಿ ಇಲ್ಲ, ಅವರಿಗೆ ಕೇವಲ ತಮ್ಮ ತತ್ವ ಸಿದ್ಧಾಂತಗಳ ಕುರಿತು ಮಾತ್ರ ಚಿಂತೆ. ಅದನ್ನೇ ಸಾಧಿಸಲು ವಾಗ್ವಾದಗಳನ್ನು ಮಾಡುತ್ತಾರೆ. ಅವರು ಲೋಕ ಪ್ರಕಾರವಾಗಿ ಜೀವಿಸುವವರು, ಪಾಪದಲ್ಲಿ ಜೀವಿಸುವವರು ಆಗಿರುತ್ತಾರೆ. ಅವರಿಗೆ ಆತ್ಮ ರಕ್ಷಣೆ ಬಗ್ಗೆಯೇ, ರಕ್ಷಣೆ ಹೊಂದಿದ ವಿಶ್ವಾಸಿ ಹೊಂದಿದ ರಕ್ಷಣೆಯನ್ನು ಕಾಪಾಡಿಕೊಳ್ಳುವುದರ ಬಗ್ಗೆಯೇ ಅನುದಿನವೂ ಪರಿಶುದ್ಧವಾಗಿ ಯೇಸುಕ್ರಿಸ್ತನ ಜೊತೆಯಲ್ಲಿ ನಡೆಯುವುದರ ಕುರಿತು ಚಿಂತೆಯಿಲ್ಲ. ಯೇಸು ನಾಮದವರಿಗೆ ಕೇವಲ ಚಿಂತೆ, ದೀಕ್ಷಾಸ್ನಾನ ಯಾರ ಹೆಸರಿನಲ್ಲಿ ಕೊಡಬೇಕು, ಯೆಹೋವ ಸಾಕ್ಷಿಯವರಿಗೆ ಚಿಂತೆ ಯೇಸುವಿನ ದೈವತ್ವ ಹೇಗೆ ಅಲ್ಲಗಳೆಯುವುದು.

"ಆದದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ. ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರಮಾಡುವವರಾಗಿರಿ" (ಕೊಲೊ. 2:6–7).

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**

ನನ್ನ ರಕ್ಷಣೆಯು ಲೋಕದ ಕಟ್ಟಕಡೆಯವರೆಗೆ ವ್ಯಾಪಿಸುವಂತೆ ನಿನ್ನನ್ನು
ಅನ್ಯ ಜನಾಂಗಗಳಿಗೂ ಬೆಳಕನ್ನಾಗಿ ದಯಪಾಲಿಸುವೆನು (ಯೆಶಾ. 49:7).

# ಆರಾಧನೆ

**ವಯಸ್ಕರ ಸ್ವರ**

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಕೆಲವರು ಸರಿಯಾಗಿ ಬಟ್ಟೆಯನ್ನು ಇಸ್ತ್ರಿ ಮಾಡಿಕೊಳ್ಳಲು ಸಾಧ್ಯವಾಗದ ನಿಮಿತ್ತ ಇನ್ನು ಕೆಲವರು ಹೊಸ ಬಟ್ಟೆ, ಚಪ್ಪಲಿ ಇಲ್ಲ ಎಂದು ಆರಾಧನೆಗೆ ಹೋಗದೆ ಇರುತ್ತಾರೆ. ಹಾಗಾದರೆ ನಿನಗೆ ಯಾವುದು ಪ್ರಿಯವಾದುದು? ನಿಮಗೆ ಪ್ರಿಯವಾದ ವಸ್ತುಗಳನ್ನು, ವ್ಯಕ್ತಿಗಳ ವ್ಯಾಮೋಹವನ್ನು ಬಿಟ್ಟು ಕರ್ತನನ್ನು ಆರಾಧಿಸಿರಿ, ಕೆಲವರು ಭಾನುವಾರ ಆರಾಧನೆಗೆ ಬಾರದೆ ಮದುವೆ, ಬರ್ತಡೆ ಪಾರ್ಟಿ, ಕೆಲಸ ಎಂದು ಸುತ್ತಾಡುತ್ತಾ ಇರುವರು. "ನನ್ನನ್ನು ಸನ್ಮಾನಿಸುವವರನ್ನು ನಾನು ಸನ್ಮಾನಿಸುವೆನು ನನ್ನನ್ನು ತಿರಸ್ಕಾರ ಮಾಡುವವರು ತಿರಸ್ಕಾರ ಹೊಂದುವರು" (1 ಸಮು. 2:30). ಅಬ್ರಹಾಮನಿಗೆ ದೇವರು ತಾನು ಹೆಚ್ಚೋ? ಮಗನಾದ ಇಸಾಕನು ಹೆಚ್ಚೋ ಎಂದು ಪರೀಕ್ಷಿಸಿದಾಗ ಅಬ್ರಹಾಮನು ಪ್ರಿಯ ಮಗನನ್ನು ಅರ್ಪಿಸಲು ಮುಂದಾಗಿದ್ದು ದೇವರು ನನಗೆ ಪ್ರಿಯವಾದುದ್ದು ಎಂದು ತಿಳಿಸಲ್ಪಡುವವನಂತೆ ಇದ್ದನು. "ತನುಮನಗಳು ಕ್ಷಯಿಸಿದರೂ ನನ್ನ ಆತ್ಮಕ್ಕೆ ಶರಣನೂ ನನ್ನ ಶಾಶ್ವತವಾದ ಪಾಲೂ ದೇವರೇ" (ಕೀರ್ತ. 73:26).

3) **ಸರ್ವಾಂಗ ಹೋಮವಾಗಿ ಸಮರ್ಪಿಸಿ ಆರಾಧನೆ** (ಆದಿ. 22:2):– ಯಾವುದನ್ನು ಉಳಿಸಿಕೊಳ್ಳದೆ ಸಂಪೂರ್ಣವಾಗಿ ಅರ್ಪಿಸುವುದೇ ಸರ್ವಾಂಗದ ಆರಾಧನೆ. ದೇವರ ವಾಕ್ಯ ಹೇಳುತ್ತದೆ, "ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ವಿವೇಕ ಪೂರ್ವಕವಾದ ಆರಾಧನೆಯು" (ರೋಮ. 12:1–2). ಕೆಲವರು ಬಾಯಲ್ಲಿ ಹಾಡನ್ನು ಹಾಡಿದರೆ ಮನಸ್ಸನ್ನು ಎಲ್ಲೋ ಇಟ್ಟುಕೊಂಡು ಆರಾಧಿಸುತ್ತಾರೆ. "ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ. ಆದರೆ ಅವರ ಮನಸ್ಸು ನನಗೆ ದೂರವಾಗಿದೆ" (ಮಾರ್ಕ. 7:6). ಇಂದಿನ ಯೌವನಸ್ಥರು ಒಂದು ಕೈಯನ್ನು ಮೇಲಕ್ಕೆತ್ತಿ ಆರಾಧಿಸುವಾಗ ಮತ್ತೊಂದು ಕೈಯಲ್ಲಿ ಮೊಬೈಲಲ್ಲಿ ಎಸ್.ಎಮ್.ಎಸ್ ಕಳಿಸುವವರು ಸಭೆಯಲ್ಲಿರುತ್ತಾರೆ. Oh! What a worship. ದಾವೀದನು ಬರೆಯುತ್ತಾನೆ, "ನನ್ನ ಸರ್ವೇಂದ್ರಿಯಗಳೇ ಆತನ ಪವಿತ್ರ ನಾಮವನ್ನು ಕೀರ್ತಿಸಿರಿ" (ಕೀರ್ತ. 103:1). ನಮ್ಮನ್ನೇ ನಾವು ಸಂಪೂರ್ಣವಾಗಿ ಸಮರ್ಪಿಸುವ ಆರಾಧನೆಯೇ ನಿಜವಾದ ಆರಾಧನೆಯಾಗಿದೆ.

4) **ಸಿದ್ಧತೆಯೊಂದಿಗೆ ಮಾಡುವ ಆರಾಧನೆ** :– (ಆದಿ. 22:3). ಅಬ್ರಹಾಮನು ಬೆಳಿಗ್ಗೆ ಎದ್ದು ಕತ್ತೆಯನ್ನು, ಯಜ್ಞಕ್ಕೆಬೇಕಾದ ಕಟ್ಟಿಗೆ, ಬೆಂಕಿ, ಕತ್ತಿ, ಇಬ್ಬರು ಸೇವಕರನ್ನು, ಇಸಾಕನನ್ನು ಇವೆಲ್ಲವುಗಳನ್ನು ಸಿದ್ಧಪಡಿಸಿ ತೆಗೆದುಕೊಂಡು ಹೊರಟನು (ಆದಿ. 22:3–6). ಇಂದು ಸಭೆಯ ಆರಾಧನೆ 10 ಗಂಟೆಗೆ ಎಂದಾದರೆ ಮನೆಯಿಂದ ಹೊರಡುವಾಗ 10:30 ಗಂಟೆಯಾಗಿ ಸಭೆಗೆ ತಲುಪುವಾಗ 11–11:30 ಮುಗಿದು ಅರ್ಧ ಆರಾಧನೆ ಮುಗಿದು ಹೋಗಿರುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಸಭೆಯ ಸಭಾಪಾಲಕರು ಇದೇ ವಿಷಯದಲ್ಲಿ ತುಂಬಾ ಬೇಸರಗೊಳ್ಳುತ್ತಾರೆ. ವಿಶ್ವಾಸಿಗಳು ಎಷ್ಟು ಹೇಳಿದರೂ ಕಿವಿಗೆ ಹಾಕಿಸಿಕೊಳ್ಳದೇ ಅವರದೇ ಆದ ಸಮಯದಲ್ಲಿ ಮಾರ್ಕೇಟುಗಳಿಗೆ ಹೋದ ಹಾಗೆ ಹೋಗಿ ಬರುತ್ತಾರೆ. ಅಬ್ರಹಾಮನು ಬೆಳಿಗ್ಗೆ ಎದ್ದು ಸಿದ್ಧತೆಯೊಂದಿಗೆ ಮೋರಿಯ ದೇಶಕ್ಕೆ ಹೊರಟು ಹೋದನು. ಸಾಮಾನ್ಯವಾಗಿ ಕೆಲಸ ಕಛೇರಿಗಳಿಗೆ ಹೋಗುವ ನಾವು ಅಧಿಕಾರಿಗಳು ಬರದಿದ್ದರೂ ಅವರಿಗಾಗಿ ಗಂಟೆಗಟ್ಟಲೆ ಕಾದು ಕೊಂಡಿರುತ್ತೇವೆ. ಅಧಿಕಾರಿಗಳನ್ನು ಭೇಟಿಮಾಡಲು ಹೊತ್ತು ಮುಂಚೆಯೇ ಹೊರಟು ಹೋಗುತ್ತೇವೆ. ಆದರೆ ದೇವರ ಸನ್ನಿಧಿಗೆ ಬರಲು ಯಾಕೆ ತಾತ್ಸರ?

"ನಿನ್ನ ಆಲಯದ ಅಂಗಳದಲ್ಲಿ ಕಳೆದ 1 ದಿನವು ಬೇರೆ ಸಹಸ್ರ ದಿನಗಳಿಗಿಂತ ಉತ್ತಮವಾಗಿದೆ" (ಕೀರ್ತ. 84:10). ಅಬ್ರಹಾಮನು ಆರಾಧನೆಗೆ ಬೇಕಾದ್ದನ್ನು ಸಿದ್ಧಪಡಿಸಿಕೊಂಡು ಹೋದನು. ಕೆಲವರು ಯಾವ ಸಿದ್ಧತೆಯಿಲ್ಲದೆ ಅವಸರದಲ್ಲಿ ಆರಾಧನೆಗೆ ಧಾವಿಸುವರು. ಎಲೀಯನು ಯಜ್ಞವೇದಿಯನ್ನು ಸಿದ್ಧಪಡಿಸಿ ಪ್ರಾರ್ಥಿಸುವಾಗ ಮಾತ್ರವೇ ಮೇಲಿಂದ ಬೆಂಕಿ ಇಳಿಯಿತಲ್ಲವೇ? ಇನ್ನು ಕೆಲವರಂತೂ ಭಾನುವಾರ ಬೆಳಿಗ್ಗೆ

ಅರಣ್ಯವೂ ಮರುಭೂಮಿಯೂ ಆನಂದಿಸುವವು; ಒಣನೆಲವು ಹರ್ಷಿಸಿ ತಾವರೆಯಂತೆ ಕಳಕಳಿಸುವದು (ಯೆಶಾ. 35:1).

ಎದ್ದಾಗಲೇ ಕೋಪಿಸಿ, ಗುಣುಗುಟ್ಟಿ, ರೇಗಿ, ಕೂಗಿ, ಸಿದ್ಧತೆ ಮಾಡಿಕೊಂಡು ಬರುತ್ತಾರೆ. "ದೇವಸ್ಥಾನಕ್ಕೆ ಹೋಗುವಾಗ ನಿನ್ನ ಹೆಜ್ಜೆಯನ್ನು ಗಮನಿಸು" (ಪ್ರಸ. 5:1). "ಹೊಲಸು ಮಾತು, ಹುಚ್ಚು ಮಾತು ಕುಚೋದ್ಯ ಮಾತು ಇವು ಬೇಡ, ಆಯುಕ್ತವಾಗಿವೆ; ಇವುಗಳನ್ನು ಬಿಟ್ಟು (ಇಟ್ಟುಕೊಂಡು ಅಲ್ಲ) ದೇವರಿಗೆ ಉಪಕಾರ ಸ್ತುತಿ ಮಾಡುವುದು ಉತ್ತಮ" (ಎಫೆ. 5:4–5). "ಕೃತಜ್ಞತಾಸ್ತುತಿಯೊಡನೆ ಆತನ ಮಂದಿರ ದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ; ಆತನ ಉಪಕಾರ ಸ್ಮರಿಸಿರಿ; ಆತನ ನಾಮವನ್ನು ಕೊಂಡಾಡಿರಿ" (ಕೀರ್ತ. 100:4). ದಾವೀದನು ಹೇಳುತ್ತಾನೆ, "ಯೆಹೋವನ ಮಂದಿರಕ್ಕೆ ಹೋಗೋಣ, ಬಾ ಎಂದು ಜನರು ನನ್ನನ್ನು ಕರೆದಾಗ ನನಗೆ ಸಂತೋಷವಾಯಿತು" (ಕೀರ್ತ. 122:1). ಅಬ್ರಹಾಮನು ಏನೇನು ತೆಗೆದುಕೊಂಡು ಆರಾಧಿಸಲು ಹೋದನು ಎಂದು ತಿಳಿದುಕೊಳ್ಳುವ. ಕಟ್ಟಿಗೆ (ನಾವು ಸ್ತುತಿಸ್ತೋತ್ರದೊಂದಿಗೆ ಬರಬೇಕು). ಬೆಂಕಿ (ಪವಿತ್ರಾತ್ಮನನ್ನು) ಕತ್ತಿ (ದೇವರ ವಾಕ್ಯ) ಇದನ್ನೆಲ್ಲಾ ತೆಗೆದುಕೊಂಡು ಹೊರಟು ಹೋದನು (ಆದಿ. 22:6). "ಅವರ ಬಾಯಲ್ಲಿ ಯೆಹೋವನ ಸ್ತೋತ್ರವೂ ಕೈಯಲ್ಲಿ ಇಬ್ಬಾಯಿ ಕತ್ತಿಯೂ ಇರಲಿ" (ಕೀರ್ತ. 149:6). ಅಬ್ರಹಾಮನು ಸಿದ್ಧತೆಯೊಂದಿಗೆ ಮೋರಿಯ ದೇಶಕ್ಕೆ ಅಂದರೆ ದೇವರು ಹೇಳಿದ ಸ್ಥಳಕ್ಕೆ ಹೊರಟು ಹೋದನು. ಇಲ್ಲಿ ಗಮನಿಸಬಹುದಾದ ಅಂಶವೇನೆಂದರೆ ದೇವರು ಆದುಕೊಂಡ ಸ್ಥಳದಲ್ಲೇ ಆರಾಧನೆ, ಸರ್ವಾಂಗ ಹೋಮ, ದಶಮಾಂಶ ಎಲ್ಲವನ್ನು ಅರ್ಪಿಸಬೇಕಾದ ಅಂಶ.

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

## ಬೇಕಾಗಿದ್ದಾರೆ

- **ಜಿಎನ್ಎಮ್ ನರ್ಸ್**
- **ಸ್ಟಾಫ್ ನರ್ಸ್**
- **ಎಮ್ಎಸ್ಡಬ್ಲ್ಯು (ಸೈಕಾಲಾಜಿಸ್ಟ್)**
- **ಎಮ್.ಬಿ.ಬಿ.ಎಸ್ ವೈದರು**
- **ಮನೋರೋಗ ತಜ್ಞ ವೈದ್ಯರು (ಸೈಕಿಯಾಟ್ರಿಸ್ಟ್)**
- **ಕ್ಲೀನರ್ ಮತ್ತು ವಾರ್ಡ್ ಬಾಯ್**
- **ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.**

**ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**9902334941, 0820 2002781.**

## ಜಾಹಿರಾತು

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ನನ್ನನ್ನು ಪ್ರೀತಿಸುವವರಿಗೆ ಧನದ ಬಾಧ್ಯತೆಯನ್ನು ದೊರಕಿಸಿ ಅವರ ಬೊಕ್ಕಸಗಳನ್ನು ತುಂಬಿಸುವೆನು (ಜ್ಞಾನೋ. 8:21).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

**ನಮ್ಮ ವಿಳಾಸ :**
**ಸಂಪಾದಕರು, 'ದೇವರ ಸ್ವರ', ಬೇತೇಲ್ ಚರ್ಚ್, ಯೇಸುಪುರ,**
**ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Email : editor_voiceofgod@hotmail.com
Website : www.divinegen.org www.dgmbethelchurch.org

**ನಮ್ಮ ಕಛೇರಿ ವಿಳಾಸ :**
**ಡಿಜಿಎಂ ಬೇತೇಲ್ ಕಛೇರಿ,**
**ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Ph: (0820) 2589070, 200 2781
E-mial: dgmofficial@gmail.com

**ಮಹಿಳೆಯರ ಸ್ವರ**

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) **ಪರಿಶುದ್ಧವಾದ ದೇವರನ್ನು ನೋಡಲು ಪರಿಶುದ್ಧವಾಗಿ ಜೀವಿಸಬೇಕು** : (ಮತ್ತಾ. 5:8, ಇಬ್ರಿ. 12:14–15). ಹಳೆಯ ಒಡಂಬಡಿಕೆಯಲ್ಲಿ ಮಹಾಯಾಜಕನು ವರ್ಷಕ್ಕೆ ಒಂದು ಸಾರಿ ಮಹಾಪರಿಶುದ್ಧ ಸ್ಥಳಕ್ಕೆ ಕುರಿಯ ರಕ್ತದೊಂದಿಗೆ ಹೋಗುತ್ತಿದ್ದನು. ಅವನಲ್ಲಿ ಪರಿಶುದ್ಧತೆ ಇಲ್ಲದಿರುತ್ತಿದ್ದರೆ ಅಲ್ಲಿಯೇ ಅವನು ಸಾಯುತ್ತಿದ್ದನು ಹಾಗೂ ಪರಿಶುದ್ಧತೆಯಿಲ್ಲದೆ ಲೇವಿಯರು ಮಂಜೂಷವನ್ನು ಮುಟ್ಟುವ ಆಗಿರಲಿಲ್ಲ. "ಮಹಾಯಾಜಕನಾದ ಆರೋನನ ಮಕ್ಕಳು ತಪ್ಪಾದ ಬೆಂಕಿಯನ್ನು ಸಮರ್ಪಿಸಿದ್ದರಿಂದಾಗಿ ದೇವರ ಮುಂದೆ ಸತ್ತು ಹೋದರು" (ಯಾಜಕ.10:1–3). ಪರಿಶುದ್ಧ ದೇವರನ್ನು ನಾವು ನೋಡಬೇಕಾದರೆ ನಮಗೂ ಪರಿಶುದ್ಧತೆ ಅವಶ್ಯಕವಾಗಿ ಬೇಕಾಗಿದೆ.

5) **ಎರಡನೇ ಮರಣದಿಂದ ತಪ್ಪಿಸಿಕೊಳ್ಳಲು** :– (ಪ್ರಕ. 20:5–6). 3 ವಿಧವಾದ ಮರಣಗಳಿವೆ.

   1) ಆತ್ಮೀಕ ಮರಣ (ಆದಿ. 2:15–17, ಎಫೆ. 2:1).
   2) ಶಾರೀರಿಕ ಮರಣ (ಆದಿ. 5:1–4).
   3) ನಿತ್ಯ ಮರಣ ಅಥವಾ ಎರಡನೇ ಮರಣ (ಪ್ರಕ. 21:8, 20:14–15).

ಮನುಷ್ಯನು ಪಾಪದ ನಿಮಿತ್ತವಾಗಿ ಕಳಕೊಂಡ ಪರಿಶುದ್ಧ ದೇವರ ಅನ್ಯೋನ್ಯತೆಗೆ ಆತ್ಮೀಕ ಮರಣವೆನ್ನುತ್ತಾರೆ. ಮನುಷ್ಯನ ಆತ್ಮ ಹಾಗೂ ಶರೀರದ ಬೇರ್ಪಡುವಿಕೆಗೆ ಶಾರೀರಿಕ ಮರಣವೆನ್ನುತ್ತಾರೆ. ಹಾಗೆಯೇ ಮನುಷ್ಯನು ಆತ್ಮೀಕ ಮರಣದಲ್ಲಿಯೇ ಇದ್ದು ಶರೀರದಲ್ಲಿ ಸತ್ತು ಹೋದರೆ ಪಾಪದ ಶಿಕ್ಷೆಯಾದ ನರಕವನ್ನು ಅನುಭವಿಸಲು ಹೋಗುವುದಕ್ಕೆ ನಿತ್ಯ ಮರಣ ಅಥವಾ ಎರಡನೇ ಮರಣವೆನ್ನುತ್ತಾರೆ. "ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯವಿಚಾರಣೆ ಗೊಳಗಾಗುವುದಿಲ್ಲ" (1 ಕೊರಿ. 11:31).

6) **ಆತ್ಮೀಕ ಗುಣಗಳನ್ನು ಹೊಂದಿಕೊಳ್ಳಲು** :–"ನೀನು ಯೌವನದ ಇಚ್ಛೆಗಳಿಗೆ ದೂರವಾಗಿರು; ನೀತಿ ವಿಶ್ವಾಸ ಪ್ರೀತಿ ಮತ್ತು ಸಮಾಧಾನವನ್ನು ಸಂಪಾದಿಸುವದಕ್ಕೆ ಶುದ್ಧ ಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವರ ಸಂಗಡ ಪ್ರಯಾಸಪಡು" (2 ತಿಮೊ. 2:22). "ಯೌವನಸ್ಥನೆಂದು ನಿನ್ನನ್ನು ಅಸಡ್ಡೆ ಮಾಡುವದಕ್ಕೆ ಯಾರಿಗೂ ಅವಕಾಶಕೊಡದೆ ನಂಬುವವರಿಗೆ ನಡೆ ನುಡಿ ಪ್ರೀತಿ ನಂಬಿಕೆ ಶುದ್ಧತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು" (1 ತಿಮೊ. 4:12).

7) **ಆತ್ಮೀಕವಾಗಿ ಬಲಗೊಳ್ಳಲು** : "ಶುದ್ಧ ಹಸ್ತನು ಬಲಗೊಳ್ಳುತ್ತಲೇ ಇರುವನು" (ಯೋಬ. 17:9). ನಮ್ಮಲ್ಲಿ ಪರಿಶುದ್ಧತೆ ಇದ್ದರೆ ದೇವರು ನಮ್ಮನ್ನು ಆತ್ಮೀಕ ಬಲದಿಂದ ತುಂಬಿಸುತ್ತಾನೆ. ಸಂಸೋನನು ಪಾಪ ಮಾಡುವವರೆಗೆ ವೈರಿಯು ಅವನನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಯಾವಾಗ ಅವನಲ್ಲಿ ಪಾಪ ಬಂದಿತೋ ಅವನು ಸೋತು ತನ್ನ ಶಕ್ತಿಯನ್ನೆಲ್ಲಾ ಕಳಕೊಂಡು ಕಣ್ಣು ಕೀಳಲ್ಪಟ್ಟವನಾಗಿ ವೈರಿಗೆ ಕೈದಿಯಾಗಿ ಪರಿತಾಪಕರವಾಗಿ ಸಾಯಬೇಕಾಯಿತು. ಯೆಹೋ. 7:1–15 ರಲ್ಲಿ ಆಕಾನನು ಪಾಪ ಮಾಡುವವರೆಗೆ ಇಸ್ರಾಯೇಲರಿಗೆ ಜಯ ಸಿಕ್ಕಿತು. ಯಾವಾಗ ಆಕಾನ ಪಾಪ ಮಾಡಿದನೋ ದೇವರು ಅವರನ್ನು ಬಿಟ್ಟು ಹೋದನು ಮತ್ತು ಆಯಿಯ ಜನರು ಅವರನ್ನು ಸೋಲಿಸಿದರು. "ದೇವರಿಗೆ ಒಳಗಾಗಿರಿ. ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು" (ಯಾಕೋ. 4:7).

8) **ನಮ್ಮ ಜೀವಿತದ ವಾಗ್ದಾನಗಳು ನೆರವೇರಲು** :– "ಪ್ರಿಯರೇ, ಈ ವಾಗ್ದಾನಗಳು ನಮಗಿರುವದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿ ಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ" (2 ಕೊರಿ. 7:1). ಆದಿ. 37:5–11ರಲ್ಲಿ ಯೋಸೇಫನಿಗೆ ಕರ್ತನು ಆತನು ಭವಿಷ್ಯದಲ್ಲಿ ಹೊಂದುವ ಶ್ರೇಷ್ಠ ಪದವಿಯ ಬಗ್ಗೆ ಮಾತನಾಡಿದಾಗ ಯೋಸೇಫನಿಗೆ ಆಗ ಕೇವಲ 17 ವರ್ಷ ಮಾತ್ರ ಪ್ರಾಯವಾಗಿತ್ತು (ಆದಿ. 37:2). ಅದರ ಮಧ್ಯದಲ್ಲಿ ಯೋಸೇಫನು ಅನೇಕ ಶೋಧನೆಗಳಲ್ಲಿ ಕಷ್ಟಗಳಲ್ಲಿ ಹಾದು ಹೋಗಬೇಕಾಯಿತು. "ಆತನು ಅವರ ಮುಂದಾಗಿ ಒಬ್ಬನನ್ನು ಕಳುಹಿಸಿದನು; ದಾಸತ್ವಕ್ಕೆ ಮಾರಲ್ಪಟ್ಟ

ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ, ಆತುರದಿಂದ ಹುಡುಕುವವರು
ನನ್ನನ್ನು ಕಂಡುಕೊಳ್ಳುವರು (ಜ್ಞಾನೋ. 8:17).

ಯೋಸೇಫನೇ ಅವನು. ಅವನ ಕಾಲುಗಳು ಕೋಳದಲ್ಲಿ ನೊಂದವು; ಕಬ್ಬಿಣದ ಬೇಡಿಗಳಿಂದ ಅವನು ಬಂಧಿತನಾದನು. ಅವನು ತನ್ನ ಮಾತು ನೆರವೇರುವ ತನಕ ಯೆಹೋವನ ವಾಕ್ಯದಿಂದ ಶೋಧಿತನಾದನು. ಅರಸನು ಅಪ್ಪಣೆಮಾಡಿ ಅವನನ್ನು ತಪ್ಪಿಸಿದನು; ಜನಪತಿಯು ಅವನನ್ನು ಬಿಡಿಸಿದನು. ಅವನನ್ನು ತನ್ನ ಮನೆಗೆ ಯಜಮಾನನನ್ನಾಗಿಯೂ ತನ್ನ ಆಸ್ತಿಗೆಲ್ಲಾ ಅಧಿಕಾರಿಯನ್ನಾಗಿಯೂ ಮಾಡಿದನು. ತನ್ನ ಪ್ರಧಾನರನ್ನು ಇಷ್ಟಾನುಸಾರವಾಗಿ ಬಂಧಿಸುವದಕ್ಕೂ ತನ್ನ ಮಂತ್ರಿಗಳಿಗೆ ಬುದ್ಧಿಕಲಿಸುವದಕ್ಕೂ ಅವನಿಗೆ ಅಧಿಕಾರಕೊಟ್ಟನು" (ಕೀರ್ತ. 105:17–22).

ಯೋಸೇಫನ ಜೀವಿತದಲ್ಲಿ ದೇವರ ವಾಗ್ದಾನ ನೆರವೇರ ಬೇಕಾದರೆ ಪಾಪದ ಪ್ರಚೋದನೆಗಳು ಆತನಿಗೆ ಬಂದವು. ಪೋಟೀಫರನ ಪತ್ನಿ ಅವನಿಗೆ ಪಾಪಕ್ಕೆ ಪ್ರಚೋದಿಸಿದಳು (ಆದಿ. 39:7–20). ಒಂದು ವೇಳೆ ಯೋಸೇಫನು ಅವತ್ತು ಫೋಟೀಫರನ ಪತ್ನಿಯೊಂದಿಗೆ ಪಾಪ ಮಾಡಿದ್ದರೆ ಅವನು ಯಾವತ್ತು ಐಗುಪ್ತ ದೇಶದ ಸರ್ವಾಧಿಕಾರಿಯಾಗುತ್ತಾ ಇರಲಿಲ್ಲ. ಅವನ ಜೀವಿತದಲ್ಲಿ ದೇವರು ಅವನ 17ನೇ ವಯಸ್ಸಿನಲ್ಲಿ ಮಾಡಿದ ವಾಗ್ದಾನ ನೆರವೇರಿದಾಗ ಯೋಸೇಫನಿಗೆ 30 ವರ್ಷ ವಯಸ್ಸಾಗಿತ್ತು (ಆದಿ.41:14–46, 41:37–45).

9) **ದೇವರ ಆಶೀರ್ವಾದಕ್ಕೆ ತಡೆಯಾಗದಿರಲು** :– "ಅಬ್ರಹಾಮನು ತೊಂಭತ್ತೊಂಭತ್ತು ವರುಷದವನಾದಾಗ ಯೆಹೋವನು ಅವನಿಗೆ ದರ್ಶನ ಕೊಟ್ಟು ನಾನು ಸರ್ವಶಕ್ತನಾದ ದೇವರು ನನಗೆ ನಡಕೊಂಡು ದೋಷವಿಲ್ಲದವನಾಗಿರು"(ಆದಿ. 17:1). ದೇವರು ಅಬ್ರಹಾಮನ 75ನೇ ವಯಸ್ಸಿನಲ್ಲಿ ಸಂತಾನದ ಕುರಿತಾಗಿರುವ ವಾಗ್ದಾನವನ್ನು ಮಾಡಿದನು. ಆದಿ.12:1–5 ಆದರೆ ವರ್ಷಗಳು ದಾಟುತ್ತಿರುವಾಗ ಅಬ್ರಹಾಮನ ಹೆಂಡತಿ ತನಗೂ ತನ್ನ ಗಂಡನಿಗೂ ಪ್ರಾಯ ಮೀರುವಂತದ್ದನ್ನು ಗಮನಿಸಿ ದೇವರ ವಾಕ್ಯಕ್ಕೆ ವಿರುದ್ಧವಾಗಿ ಆದಿ. 16:1–16ರಲ್ಲಿ ತನ್ನ ದಾಸಿಯಾದ ಹಾಗರಳೊಂದಿಗೆ ಅಬ್ರಹಾಮನು ಕೂಡಿ ತನಗೆ ಮಗುವನ್ನು ಕೊಡಲು ಪ್ರೇರೇಪಿಸಿದಳು. ಇದು ದೇವರ ಸೃಷ್ಟಿಯಲ್ಲಿ ಘೋರವಾದ ಅಪರಾಧವಾಗಿತ್ತು. ಅಬ್ರಹಾಮನು ದೇವರನ್ನು ಪರಿಪೂರ್ಣವಾಗಿ ನಂಬಬೇಕಾಗಿತ್ತು. ಅನೇಕ ಸಲ ನಾವು ಕೂಡ ದೇವರನ್ನು ನಂಬದೆ ತಪ್ಪಾದ ಹೆಜ್ಜೆಗಳನ್ನು ಇಟ್ಟುಕೊಳ್ಳುತ್ತೇವೆ. ಇದರಿಂದಾಗಿ ಅನೇಕ ಸಮಸ್ಯೆಗಳಿಗೆ ಒಳಗಾಗಿ ಅನೇಕ ದೇವರ ಆಶೀರ್ವಾದಗಳನ್ನು ಕಳಕೊಳ್ಳುತ್ತೇವೆ.

10) **ನಾವು ಪರಿಶುದ್ಧವಾಗಿ ಜೀವಿಸುವುದು ದೇವರ ಚಿತ್ತವಾಗಿರುವುದರಿಂದ** (1 ಥೆಸ. 4:3):– ದೇವರ ಚಿತ್ತವೇನೆಂದರೆ ನೀವು ಶುದ್ಧರಾಗಿ ಇರಬೇಕೆಂಬುದೇ. ನಮ್ಮ ಜೀವಿತದಲ್ಲಿ ದೇವರ ಸಂಪೂರ್ಣ ಚಿತ್ತವನ್ನು ಅರಿತವರಾಗಿರಬೇಕು ಆಗ ಮಾತ್ರ ನಾವು ಸಫಲತೆಯುಳ್ಳ ಕ್ರೈಸ್ತ ಜೀವಿತವನ್ನು ಜೀವಿಸಲು ಸಾಧ್ಯ. ವಿಮೋ. 3:5 ರಲ್ಲಿ ದೇವರು ಅವನಿಗೆ ನೀನು ಹತ್ತಿರ ಬರಬೇಡ ನಿನ್ನ ಕಾಲಿನ ಕೆರಗಳನ್ನು ತೆಗೆದು ಹಾಕು ನೀನು ನಿಂತಿರುವ ಭೂಮಿಯು ಪರಿಶುದ್ಧ ಭೂಮಿ ಎಂದು ಹೇಳಿದನು. ದೇವರು ಮೋಶೆಯನ್ನು ಶ್ರೇಷ್ಟವಾದ ಸೇವೆಗೆ ಸಿದ್ಧಪಡಿಸುತ್ತಿದ್ದನು. ಮೋಶೆ ಒಬ್ಬ ಕೊಲೆಗಾರನಾಗಿದ್ದನು. (ವಿಮೋ. 2:11–15) ದೇವರು ಮೋಶೆಯನ್ನು ತನ್ನ ಸೇವೆಯಲ್ಲಿ ಉಪಯೋಗಿಸುವ ಮುನ್ನ ಅವನಿಗೆ ದೀನತೆಯ ಹಾಗೂ ಪರಿಶುದ್ಧತೆಯ ಪಾಠವನ್ನು ಕಲಿಸಿದನು.

*ಮುಂದುವರಿಯುವದು.........*

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ1ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

**ಬೇಕಾಗಿದ್ದಾರೆ**

**ಡಿಜಿಎಮ್ ಬೇತೇಲ್ ಇಂಟರ್‌ನ್ಯಾಷನಲ್ ಶಾಲೆಗೆ ಉಪಾಧ್ಯಾಯರು (ಟೀಚರ್) ಬೇಕಾಗಿದ್ದಾರೆ.**



ಯೆಹೋವನ ಮಾರ್ಗಗಳೆಲ್ಲಾ ನೀತಿಯುಳ್ಳವುಗಳು; ಆತನು ಎಲ್ಲಾ ಕಾರ್ಯಗಳಲ್ಲಿ ಕೃಪೆತೋರಿಸುವವನು (ಕೀರ್ತ. 145:17).

# ಸಾಕ್ಷಿಯ ಸ್ವರ

- 10 ದಿನದ ಮೊದಲು ನನ್ನ ಕಿಡ್ನಿಯ ಪಕ್ಕದಲ್ಲಿ ಕಲ್ಲು ಉಂಟು ಎಂದು ಡಾಕ್ಟರ್ ಹೇಳಿದ್ದರು. ತುಂಬಾ ನೋವು ಕೂಡ ಇತ್ತು. 7ನೇ ಕೆರೀತ್ ಕೂಟಕ್ಕೆ ಬಂದಾಗ ಮೊದಲ ದಿನ ತುಂಬಾ ನೋವು ಇತ್ತು. ದೇವರು ಅದರಿಂದ ಬಿಡುಗಡೆ ಕೊಟ್ಟಿದ್ದಾನೆ. ನನ್ನ ತಾಯಿಗೆ ಕ್ಯಾನ್ಸರ್ ಕಾಯಿಲೆಯಿಂದ ಆಹಾರ ಸೇವಿಸಲು ಆಗುತ್ತಿರಲಿಲ್ಲ. ಈಗ ನನ್ನ ತಾಯಿ ಸ್ವಲ್ಪ ಸ್ವಲ್ಪ ಆಹಾರ ಸೇವಿಸುತ್ತಿದ್ದಾರೆ. ನಾನು ಈ ಕೂಟದಲ್ಲಿ ದೇವರ ಅಭಿಷೇಕವನ್ನು ಹೊಂದಿಕೊಳ್ಳುವಂತೆ ಕರ್ತನು ಸಹಾಯಮಾಡಿದನು. "ಇದು ಮನುಷ್ಯರಿಗೆ ಅಸಾಧ್ಯ; ಆದರೆ ದೇವರಿಗೆ ಎಲ್ಲವು ಸಾಧ್ಯವೇ ಅಂದನು" (ಮತ್ತಾ. 19:26).

**ಸಹೋ॥ ಸುಮ, ಸಕಲೇಶಪುರ.**

- ನನಗೆ ಈ ಹತ್ತು ದಿನದ 7ನೇ ಕೆರೀತ್ ಕೂಟದಲ್ಲಿ ದೇವ ಸೇವಕರು ಕೊಡುವ ವಾಕ್ಯದ ಮೂಲಕವಾಗಿ ತುಂಬಾ ಆತ್ಮೀಕ ಜೀವಿತದಲ್ಲಿ ಬೆಳೆಯಲು ಸಹಾಯವಾಗಿದೆ. ಆ ಮೇಲೆ ಆರಾಧನಾ ತಂಡವನ್ನು ನೋಡುವಾಗ ಆರಾಧನೆ ಮಾಡುವಂತಹ ದಾಹ ತುಂಬಾ ಹೆಚ್ಚಾಗಿದೆ. ನಂತರ ಜೋರಾಗಿ ಹಾಡು ಆಡಬೇಕಾದರೆ ತಲೆನೋವು ಬಾಧಿಸುತ್ತಿತ್ತು. ಅದನ್ನು ಸಂಪೂರ್ಣವಾಗಿ ದೇವರು ವಾಸಿಮಾಡಿದ್ದಾನೆ. "ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು" (ಯೆಶಾ. 53:5).

**ಸಹೋ॥ ಪ್ರಶಾಂತ್. ಮಂಡತ್ಯಾರು.**

- ದೇವರ ಪರಿಶುದ್ಧವಾದ ನಾಮಕ್ಕೆ ಸ್ತೋತ್ರ, "ಮಗನು ನಿಮ್ಮನ್ನು ಬಿಡುಗಡೆಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು" (ಯೋಹಾ. 8:36). 12 ವರ್ಷದಿಂದ ನನಗೆ ಸೈತಾನನ ಹೋರಾಟವಿತ್ತು. ಎಲ್ಲಿಗೆ ಹೋದರೂ, ಎಷ್ಟು ವೈದ್ಯರ ಬಳಿ ತೋರಿಸಿದರೂ ಯಾವುದೇ ಬಿಡುಗಡೆ ಸಿಗುತ್ತಿರಲಿಲ್ಲ. ಆದರೆ ನಾನು ತುಂಬಾ ಸಲ ಸಾಯಬೇಕು ಎಂದು ಅನಿಸುತ್ತಿತ್ತು. 12 ವರ್ಷಗಳಿಂದ ಸೈತಾನನಿಂದ ಕಷ್ಟ, ದು:ಖ, ಮನೆಯಲ್ಲಿ ಜಗಳ ನಾನು ಯಾರ ಬಳಿಯಲ್ಲಿಯೂ ಹೇಳಿಕೊಳ್ಳುತ್ತಿರಲಿಲ್ಲ, ನಾನು ನನ್ನ ಗೆಳತಿಯರಿಗೆ ಹೇಳುವಾಗ ನನ್ನನ್ನು ಅವರು ನಂಬುತ್ತಿರಲಿಲ್ಲ. ನನಗೆ ಬಿಡುಗಡೆ ಇಲ್ಲ ಎಂದು ಕೊರಗುತ್ತಿದ್ದೆ. ಈ 7ನೇ ಕೆರೀತ್ ಕೂಟದಲ್ಲಿ ನನಗೆ ಯೇಸುಕ್ರಿಸ್ತನು ಸಂಪೂರ್ಣ ಬಿಡುಗಡೆ ಕೊಟ್ಟಿ ನನ್ನ ಜೀವನದಲ್ಲಿ ದೊಡ್ಡ ಅದ್ಭುತವನ್ನು ಮಾಡಿದ್ದಾರೆ ಮಾತ್ರವಲ್ಲದೆ ಉತ್ತಮವಾದ ಬಾಳಸಂಗಾತಿಯನ್ನು ನನಗೆ ಕೊಟ್ಟಿದ್ದಾರೆ. ನಾವಿಬ್ಬರೂ ಕರ್ತನ ಸೇವೆಯನ್ನು ಮಾಡಬೇಕೆಂಬ ಬಯಕೆ ನಮಗಿದೆ. "ಆತನು [ದೂತನನ್ನೋ ಎಂಬಂತೆ] ತನ್ನ ವಾಕ್ಯವನ್ನು ಕಳುಹಿಸಿ ಅವರನ್ನು ಗುಣಪಡಿಸಿದನು; ಸಮಾಧಿಗೆ ಸೇರದಂತೆ ಮಾಡಿದನು" (ಕೀರ್ತ. 107:20).


**ಸಹೋ॥ ಐಮಾ ಸುಜಿ, ಮಂಗಳೂರು**

## ವರನಿಗೆ – ವಧು ಬೇಕಾಗಿದ್ದಾರೆ

**26 ವರ್ಷ ಪ್ರಾಯದ, ಇಂಜನಿಯರ್ (ಇ&ಸಿ. ಎಮ್‌ಬಿಎ). ಉದ್ಯೋಗದಲ್ಲಿರುವ 6.1 ಅಡಿ ಎತ್ತರದ ಕೊಂಕಣಿ ಮಾತನಾಡುವ ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿರುವ ವರನಿಗೆ 22–25 ವರ್ಷ ಪ್ರಾಯದ 5.7 ಅಡಿ ಎತ್ತರದ ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿರುವ ಶಾಂತಸ್ವಭಾವ ಹಾಗೂ ಕ್ರಿಸ್ತನಲ್ಲಿ ಭಯಭಕ್ತಿಯುಳ್ಳ, ಉದ್ಯೋಗಸ್ಥ, ರೂಪವತಿಯಾದ ವಧು ಬೇಕಾಗಿದ್ದಾರೆ. (ಉದ್ಯೋಗ: ಇಂಜಿನಿಯರಿಂಗ್, ಎಮ್.ಎಸ್,ಸಿ, ನರ್ಸಿಂಗ್, ಸರ್ಕಾರಿ ಹುದ್ದೆ/ಉಪನ್ಯಾಸಕಿ).**

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9844729447 8197899175.**

ನಿಮ್ಮನ್ನೂ, ನಮ್ಮನ್ನೂ ಒಂದುಮಾಡಿದವನಾದ ಆತನೇ ನಮಗೆ
ಸಮಾಧಾನ ಕರ್ತೃವಾಗಿದ್ದಾನೆ (ಎಫೆ. 2:14).



## ಮಕ್ಕಳ ಸ್ವರ

**ಸಾಮಾನ್ಯ ಜ್ಞಾನಕ್ಕಾಗಿ ಪ್ರಶ್ನೆಗಳು :**

1) ಯಾರ ಮಾತನ್ನು ಮಕ್ಕಳು ಕೇಳಬೇಕು?

2) ಯಾರನ್ನು ನಾವು ಸನ್ಮಾನಿಸಬೇಕು?

3) ಸನ್ಮಾನಿಸಿದರೆ ನಿನಗೆ ಏನಾಗುತ್ತದೆ?

4) ಯಾರಿಗೆ ನಾವು ಮನೋಭೀತಿಯಿಂದ ನಡುಗುವವರಾಗಿರಬೇಕು?

5) ಯಾರ ಶಕ್ತಿಯನ್ನು ಆಶ್ರಯಿಸಿಕೊಂಡು ಬಲಗೊಳ್ಳಬೇಕು?

6) ದೇವರು ದಯಪಾಲಿಸುವ ಏನನ್ನು ಧರಿಸಿಕೊಳ್ಳಬೇಕು?

7) ಯಾವ ಸುವಾರ್ತೆಯನ್ನು ನಾವು ತಿಳಿಸಬೇಕು?

8) ರಕ್ಷಣೆಯೆಂಬ ಯಾವುದನ್ನು ಇಟ್ಟುಕೊಳ್ಳಬೇಕು?

9) ಪವಿತ್ರಾತ್ಮನು ಕೊಡುವ ____________ ಕತ್ತಿಯನ್ನು ಹಿಡಿಯಿರಿ.

10) ಯಾರು ನಿಮಗೆ ಎಲ್ಲವನ್ನೂ ತಿಳಿಸುವನು?

## ಪ್ರಾರ್ಥನಾ ಮನವಿಗಳು

- **ದೇವರ ಸ್ವರ ಮಾಸ ಪತ್ರಿಕೆಯ ಸೇವೆಯ ಮೂಲಕ ಅನೇಕರು ರಕ್ಷಿಸಲ್ಪಡುವಂತೆ ಪ್ರಾರ್ಥಿಸಿರಿ.**
- **ಭಾರತ ದೇಶದಲ್ಲಿ ಶಾಂತಿ ಸಮಾಧಾನ ನೆಲೆಸುವಂತೆ, ಅತಿವೃಷ್ಟಿ ಅನಾವೃಷ್ಟಿ ಆಗದಂತೆ ವಾತವರಣವನ್ನು ಕರ್ತನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ನಡೆಸುವಂತೆ.**
- **ಯಾವುದೇ ಭ್ರಷ್ಟಚಾರ, ಭಯೋತ್ಪಾದನೆ, ಆತ್ಯಾಚಾರಗಳು ದೇಶದಲ್ಲಿ ನಡೆಯದಂತೆ.(ಯೆಶಾ. 60:18).**
- **ಭಾರತ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿರುವ ಪ್ರತಿಯೊಂದು ಅಧಿಕಾರಿಗಳಿಗಾಗಿ ಪ್ರಾರ್ಥಿಸಿರಿ.**
- **ದೇವರ ಸೇವಕರು ಮತ್ತು ದೇವ ಮಕ್ಕಳಿಗೆ ಯಾವುದೇ ಅಕಾಲಿಕ ಮರಣ, ದುರ್ಮರಣ, ಅಪಘಾತಗಳು, ಅನಾರೋಗ್ಯಗಳು ಸಂಭವಿಸದಂತೆ ಕರ್ತನು ತನ್ನ ಮಕ್ಕಳಿಗೆ ದೈವ ಕಾವಲು ಕೊಡುವುದಕ್ಕಾಗಿ ಪ್ರಾರ್ಥಿಸಿರಿ.**

## ಡಿಜಿಎಮ್ ಬೇತೇಲ್ ಅಂಕಣ

- **ವಿಶ್ವಾಸದಮನೆ ಅನಾಥಾಶ್ರಮದಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ ಸವಿತಾರವರು ಮರಳಿ ಕುಟುಂಬಕ್ಕೆ ಸೇರಿರುತ್ತಾರೆ.**
- **8ನೇ ಕೆರೀತ್ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಸಲ್ಪಟ್ಟಿತ್ತು. ಅನೇಕ ದೇವ ಸೇವಕರು ಈ ಕೂಟಕ್ಕೆ ಬಂದು ಕರ್ತನ ಸೇವೆಯನ್ನು ಮಾಡಿರುತ್ತಾರೆ.**
- **ಜನವರಿ 14.01.2015 ರಿಂದ 17.01.2015ರವರೆಗೆ ನಾಲ್ಕು ದಿನದ ಪವರ್ ಕಾನ್ಫರೆನ್ಸ್ ಕೂಟವು ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆಸಲ್ಪಡುತ್ತದೆ.**

ಯೆಹೋವನು ನಿನ್ನ ಭರವಸಕ್ಕೆ ಆಧಾರನಾಗಿದ್ದು ನಿನ್ನ ಕಾಲು ಪಾಶಕ್ಕೆ
ಸಿಕ್ಕದಂತೆ ನಿನ್ನನ್ನು ಕಾಪಾಡುವನು (ಜ್ಞಾನೋ. 3:26).